"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಾರನೆಯ ಅಧಿವೇಶನ

22ನೇ ಫೆಬ್ರವರಿ 2022

ಮಂಗಳವಾರ

## ವಿಷಯಾನುಕ್ರಮಣಿಕೆ (Index)


1. ***"ರಾಷ್ಟ್ರಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿದ್ದಾರೆ ಎನ್ನುವ ಬಗ್ಗೆ"***

– ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

– ಶ್ರೀ ಸಲೀಂ ಅಹಮದ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

2. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**651 – ಸಹಕಾರ ಬ್ಯಾಂಕ್‌ಗಳ ಅವ್ಯವಹಾರದ ಬಗ್ಗೆ.**

– ಡಾ॥ ವೈ.ಎ.ನಾರಾಯಣಸ್ವಾಮಿ

– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**724 – ಮಕ್ಕಳ ಪಾಲನಾ ಕೇಂದ್ರಗಳಲ್ಲಿ ಸಮಾಲೋಚಕರ ಕೊರತೆ ಬಗ್ಗೆ.**

– ಶ್ರೀ ಮುನಿರಾಜು ಗೌಡ ಪಿ.ಎಂ.

– ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**734 – ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತಿಸುವ ಬಗ್ಗೆ**

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

– ಶ್ರೀ ಎನ್.ನಾಗರಾಜು (ಎಂ.ಟಿ.ಬಿ.)(ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**743 – ಕರ್ನಾಟಕ ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ರಾಜ್ಯ ಆಯುಕ್ತರ ಹುದ್ದೆಗೆ ಸಂಬಂಧಿಸಿದ ಬಗ್ಗೆ.**

– ಶ್ರೀ ಅಡಗೂರ್ ಹೆಚ್.ವಿಶ್ವನಾಥ್

– ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**736 – ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಬಗ್ಗೆ**

– ಶ್ರೀ ಸಿ.ಎನ್.ಮಂಜೇಗೌಡ

– ಶ್ರೀ ಎನ್.ನಾಗರಾಜು (ಎಂ.ಟಿ.ಬಿ.)(ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**645 – ರಾಜ್ಯದಲ್ಲಿ ಕುಡಿಯುವ ನೀರಿನ ಸರಬರಾಜಿನ ಯೋಜನೆಗಳ ಬಗ್ಗೆ.**

– ಶ್ರೀಮತಿ ಭಾರತಿ ಶೆಟ್ಟಿ

– ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**677 – ಕಲ್ಲುಗಣಿಗಳಲ್ಲಿ ಗಣಿಗಾರಿಕೆಯಿಂದ ಅನುಭವಿಸುವ ತೊಂದರೆಗಳ ಬಗ್ಗೆ.**

– ಶ್ರೀ ಎಸ್.ರುದ್ರೇಗೌಡ

– ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**696 – ರಾಜ್ಯ ಉಗ್ರಾಣ ನಿಗಮದ ಬಗ್ಗೆ.**

– ಶ್ರೀ ಗೋವಿಂದ ರಾಜು

– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**740 – ರಾಜ್ಯದ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಇಲಾಖಾ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಮಾಹಿತಿ ಬಗ್ಗೆ.**

– ಶ್ರೀ ಎಸ್.ವ್ಹಿ.ಸಂಕನೂರ

– ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**3. ಸಭಾಪತಿಯವರ ಅನುಮತಿಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ**

**"ರಾಜ್ಯ ಅಂಗನವಾಡಿ ಕಾರ್ಯಕರ್ತೆಯವರು ಕನಿಷ್ಠ ವೇತನ ಕೋರಿ ಧರಣಿ ಪ್ರಾರಂಭಿಸಿರುವ ಬಗ್ಗೆ."**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರ ಹೇಳಿಕೆ.**

**ವಿಷಯ: ಕೋಲಾರ ನಗರದಲ್ಲಿರುವ ಎಸ್.ಎನ್. ಆರ್ ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಮೇಲೆ ಸೇವೆ ಸಲ್ಲಿಸುತ್ತಿರುವ ಸುಮಾರು 134 ನೌಕರರ ವೇತನ ಪಾವತಿಯಾಗದಿರುವ ಬಗ್ಗೆ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

**5. ಕಾರ್ಯದರ್ಶಿಯವರ ವರದಿ**

**6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕ, 2022**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಎಸ್.ವ್ಹಿ.ಸಂಕನೂರ

– ಶ್ರೀ ಎಸ್.ರುದ್ರೇಗೌಡ

– ಶ್ರೀ ಎನ್ ರವಿಕುಮಾರ್

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

***(ವಿಧೇಯಕ ಅಂಗೀಕರಿಸಲ್ಪಟ್ಟಿತು)***

**ಆ) ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2022**

– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

***(ವಿಧೇಯಕ ಅಂಗೀಕರಿಸಲ್ಪಟ್ಟಿತು)***

**ಇ) ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2022**

– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

***(ವಿಧೇಯಕ ಅಂಗೀಕರಿಸಲ್ಪಟ್ಟಿತು)***

**ಈ) ಕ್ರಿಮಿನಲ್ ಕಾನೂನು ತಿದ್ದುಪಡಿ ಅಧ್ಯಾದೇಶ, 1944 (ಕರ್ನಾಟಕ ತಿದ್ದುಪಡಿ) ವಿಧೇಯಕ, 2022**

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)

– ಶ್ರೀ ಕೆ.ಎ.ತಿಪ್ಪೇಸ್ವಾಮಿ

***(ವಿಧೇಯಕ ಅಂಗೀಕರಿಸಲ್ಪಟ್ಟಿತು)***

**7. ಪ್ರಕಟಣೆ**

**8. ಕಾರ್ಯದರ್ಶಿಯವರ ವರದಿ**

**೯. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಉ) ಕರ್ನಾಟಕ ವಿಧಾನ ಮಂಡಲದವರ ಸಂಬಳಗಳು ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2022**

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)

***(ವಿಧೇಯಕ ಅಂಗೀಕರಿಸಲ್ಪಟ್ಟಿತು)***

**ಊ) ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2022**

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)

***(ವಿಧೇಯಕ ಅಂಗೀಕರಿಸಲ್ಪಟ್ಟಿತು)***

**೧೦. "ಶಿವಮೊಗ್ಗದಲ್ಲಿ ನಡೆದ ಘಟನೆಯ ಬಗ್ಗೆ"**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)

**೧೧. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ**

– ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

***(ವಂದನಾ ನಿರ್ಣಯ ಅಂಗೀಕರಿಸಲ್ಪಟ್ಟಿತು)***

~ ~ ~

(091)22.2.2022/11.10/ಎಂ.ಎಂ-ಎಂ.ಡಿ

**ಕರ್ನಾಟಕ ವಿಧಾನ ಪರಿಷತ್ತು**

*ಮಂಗಳವಾರ, 22ನೇ ಫೆಬ್ರವರಿ 2022*

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 11 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

**(ಸದನ ಪ್ರಾರಂಭವಾಗುತ್ತಿದ್ದಂತೆ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಆಗಮಿಸಿ ಧರಣಿ ನಿರತರಾದರು)**

**ಸಭಾಪತಿಯವರು:-** ಈಗ ಪ್ರಶ್ನೋತ್ತರಗಳ ಅವಧಿ.

**ಶ್ರೀ ಆಯನೂರು ಮಂಜುನಾಥ:-** ಮಾನ್ಯ ಸಭಾಪತಿಯವರೇ, ಶಿವಮೊಗ್ಗ ಜಿಲ್ಲೆಯಲ್ಲಿ ಬಹಳ ಪ್ರಕ್ಷುಬ್ಧ ಪರಿಸ್ಥಿತಿ ಇದೆ. ಸ್ವಲ್ಪ ಕಾಲಾವಕಾಶ ಕೊಟ್ಟರೆ ಅದನ್ನು ಪ್ರಸ್ತಾಪ ಮಾಡುತ್ತೇವೆ.

**ಸಭಾಪತಿಯವರು:-** ತಾವು ಹೆಸರನ್ನು ಕೊಟ್ಟಿದ್ದೀರಿ, ನೋಟಿಸ್ ಕೊಟ್ಟಿಲ್ಲ. ನೋಟಿಸ್ ಈಗ ಬಂತು. ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ಅವಕಾಶ ಕೊಡುತ್ತೇನೆ.

**ಶ್ರೀ ಆಯನೂರು ಮಂಜುನಾಥ:-** ಆಯಿತು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಸಲೀಂ ಅಹಮದ್‌ರವರು ಸಭಾಪತಿಯವರನ್ನು ಕೈ ಮುಗಿದು ಸಂಬೋಧಿಸಿದರು)**

**ಸಭಾಪತಿಯವರು:-** ಸದನದ ಬಾವಿಯಲ್ಲಿ ನಿಂತವರು ಯಾರೂ ಮಾತನಾಡಬಾರದು. ಕೈ ಮುಗಿಯಿರಿ ಅಥವಾ ಏನಾದರೂ ಮುಗಿಯಿರಿ ಆದರೆ ಬಾವಿಯಲ್ಲಿ ನಿಂತು ಏನನ್ನೂ ಮಾತನಾಡಬಾರದು.

***1. ರಾಷ್ಟ್ರಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿದ್ದಾರೆ ಎನ್ನುವ ಬಗ್ಗೆ.***

\- - - -

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)(ಸ್ವಸ್ಥಾನದಿಂದ):-** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ನಮ್ಮ ವಿನಂತಿ ಏನಿತ್ತು ಅದು ಇನ್ನೂ ಪೂರ್ಣವಾಗಿಲ್ಲ. ಆದರೂ ಸದನ ಗದ್ದಲವಾಗುವುದು ಬೇಡ ಎಂದು ತಾವು ಹೇಳಿದ ನಂತರ ನಾವು ತಮ್ಮ ಅನಿಸಿಕೆಗಳಿಗೆ ಗೌರವವನ್ನು ಕೊಟ್ಟು ನಾವು ಸುಮ್ಮನೇ ನಿಲ್ಲುತ್ತೇವೆ. ಪ್ರಶ್ನೋತ್ತರಗಳನ್ನು ದಯವಿಟ್ಟು ಸದನದ ಮುಂದೆ ಮಂಡಿಸಿ ಮುಂದೆ ಹೋಗುವುದು ಒಳ್ಳೆಯದು. ತಾವು ಹೇಳಿದ್ದಕ್ಕೋಸ್ಕರ ನಾವು ಇವತ್ತು ಆ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಬಾಕಿ ಆಮೇಲೆ ಮಾತನಾಡುತ್ತೇವೆ.

**ಸಭಾಪತಿಯವರು:-** ನಾನು ನಿಮಗೆ ವಿನಂತಿ ಮಾಡಿದ್ದೇನೆ, ಏನೆಂದರೆ, ಟೇಬಲ್ ಮಾಡುವುದನ್ನು ಮಾಡಬೇಕು. ಆದರೆ ಕೆಲವು ಪ್ರಶ್ನೆಗಳು ಪ್ರಮುಖವಾಗಿವೆ. ಮಾನ್ಯ ಸದಸ್ಯರುಗಳು ಮಾತನಾಡಲಿ. ಪ್ರಶ್ನೋತ್ತರ ಅವಧಿಯನ್ನು ಬೇಗನೆ ಮುಗಿಸುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದನ್ನು ಪುನಃ ನಾವು ಚರ್ಚೆಗೆ ತೆಗೆದುಕೊಂಡರೆ ಸರಿ ಬರುವುದಿಲ್ಲ. ಪುನಃ ಅಲ್ಲಿಗೇ ಬರುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರವನ್ನು ಎಲ್ಲರೂ ಕೇಳಬೇಕೆಂಬುದು ನಮ್ಮ ವಿನಂತಿಯಾಗಿದೆ. ಯಾರಾದರೂ ಕೇಳದಿದ್ದರೆ ಅವರು ನಿಂತಿರುತ್ತಾರೆ, ಏನೂ ಮಾಡುವುದಕ್ಕಾಗುವುದಿಲ್ಲ. ಪ್ರಶ್ನೆ ಕೇಳುವವರಾದರೂ ಕೇಳಬೇಕಲ್ಲವೇ?

**ಶ್ರೀ ಬಿ.ಕೆ. ಹರಿಪ್ರಸಾದ್(ಸ್ವಸ್ಥಾನದಿಂದ):-** ಮಾನ್ಯ ಸಭಾಪತಿಯವರೇ, ಹಾಗಾದರೆ ನಮ್ಮ ಗಂಟಲಿಗೆ ನಾವು ಕೆಲಸ ಕೊಡುತ್ತೇವೆ, ತಾವು ಮಾಡಿಕೊಳ್ಳಿ.

**ಶ್ರೀ ಸಲೀಂ ಅಹಮದ್(ಸ್ವಸ್ಥಾನದಿಂದ):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ನಾವು ಹೇಳದ ಹಾಗೆ ಕೇಳಬೇಕು ಎನ್ನುವುದು ಸರಿಯಲ್ಲ (ಗೊಂದಲ)

**ಸಭಾಪತಿಯವರು:-** ಎಷ್ಟು ಜನ ಮಾತನಾಡುತ್ತೀರಿ . . .

**(ಮುಂದು)**

(92) ಎಸ್‌ಪಿಆರ್/ಎಕೆ/11:20/22/02/2022

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿದ್ದರು)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಸದಸ್ಯರಿಗೆ ಪ್ರಶ್ನೆಯನ್ನು ಕೇಳಲು ಅವಕಾಶವನ್ನು ನೀಡುವುದಿಲ್ಲವೆಂದಾದರೆ ಹೇಗೆ?

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಸಲೀಂ ಅಹಮದ್‌ರವರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನಮ್ಮದೂ ಸಹ ಸಾಕಷ್ಟು ಪ್ರಶ್ನೆಗಳಿವೆ.

**(ಗೊಂದಲ)**

**ಸಭಾಪತಿಯವರು:-** ಸದನದ ಬಾವಿಯೊಳಗಿರುವವರು ತಮ್ಮ ಸ್ಥಾನಗಳಿಗೆ ತೆರಳಿ ಮಾತನಾಡುವಂತಿಲ್ಲ. ಒಮ್ಮೆ ಸದನದ ಬಾವಿಯೊಳಗೆ ಬಂದರೆ, ಅಲ್ಲಿಯೇ ಇರಬೇಕು.

**ಸಲೀಂ ಅಹಮದ್:-** ಆಡಳಿತ ಪಕ್ಷದವರು ಮಾತನಾಡುವುದರ ಬಗ್ಗೆ ನಾವು ಹೇಳಬೇಕು. ಒಂದು ವೇಳೆ ಅವರುಗಳು ನಮ್ಮ ಮೇಲೆ ದಾಳಿ ಮಾಡಿದರೆ ....

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಯಾವ ರೀತಿಯ ದಾಳಿ ಮಾಡಿದ್ದೇವೆ?

**ಸಭಾಪತಿಯವರು:-** ನಿಯಮಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಸದನದ ಬಾವಿಗೆ ಬರುತ್ತೀರಿ ಪುನಃ ನಿಮ್ಮ ಸ್ಥಳಕ್ಕೆ ತೆರಳುತ್ತೀರಿ. ಈ ರೀತಿಯಾಗಿ ಎಷ್ಟು ಬಾರಿ ಮಾಡುತ್ತೀರಿ?

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನಾವುಗಳು ನಮ್ಮ ಪರವಾಗಿ ಏನಾದರೂ ಹೇಳಬೇಕಲ್ಲವೇ?

**ಸಭಾಪತಿಯವರು:-** ಈಗ ಪ್ರಶ್ನೋತ್ತರ ಕಲಾಪಗಳನ್ನು ತೆಗೆದುಕೊಂಡು ಅದರ ಬಗ್ಗೆ ಚರ್ಚೆಯನ್ನು ಮಾಡೋಣ; ಪ್ರಶ್ನೆಗಳ ಬಗ್ಗೆ ಕನಿಷ್ಠ ಒಂದು ದಿನವಾದರೂ ಸಹ ಚರ್ಚೆಯಾಗಿಲ್ಲ. ಪ್ರಶ್ನೋತ್ತರ ಕಲಾಪವನ್ನು ಬಹಳ ಬೇಗನೇ ಮುಗಿಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ನಿಲುವಿನಲ್ಲಿ ಯಾವುದೇ ರೀತಿಯ ಬದಲಾವಣೆ ಇಲ್ಲ. ಆದ್ದರಿಂದ ದಯಮಾಡಿ, ನಿನ್ನೆಯ ದಿನ ತಾವು ಹೇಳಿದ ನಂತರ ನಾವುಗಳೆಲ್ಲರೂ ಒಂದು ನಿರ್ಣಯವನ್ನು ತೆಗೆದುಕೊಂಡು, ಸಭಾಪತಿಯವರಿಗೆ ಸಹಕಾರವನ್ನು ನೀಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ನಡೆದುಕೊಳ್ಳುತ್ತೇವೆ. ಈಗ ಉತ್ತರಗಳೆಲ್ಲವೂ ಬಂದಿವೆ. ಅವುಗಳನ್ನು ಮಂಡಿಸಿದರೆ ಆಯಿತು. ಕೆಲವು ವಿಧೇಯಕಗಳು ಬಂದಿದ್ದು, ಅವುಗಳನ್ನು ಅನುಮೋದಿಸಿದರಾಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದನವನ್ನು ಹೀಗೇಯೇ ನಡೆಸಿ ಎಂದು ನಿರ್ದಿಷ್ಟಪಡಿಸುವ ಅಧಿಕಾರವು ವಿರೋಧ ಪಕ್ಷದ ನಾಯಕರಿಗೆ ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಆ ರೀತಿಯಾಗಿ ಹೇಳುತ್ತಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿನವೂ ಸಹ ತಾವು ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಂಡಿದ್ದೀರಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಪೂರ್ತಿ ಮಾತನಾಡುವರೆಗೆ ಅವರು ಕಾಯಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಅವರಿಗೆ ಬೇಡದೇ ಇರಬಹುದು ; ಆದರೆ ನಮಗೆ ಅವಶ್ಯಕತೆ ಇದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎಸ್.ಈಶ್ವರಪ್ಪನವರು ಹೇಳಿರುವುದು ತಪ್ಪು ಎಂಬುದಾಗಿ ಇವತ್ತಿನ ದಿವಸ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾದ ಶ್ರೀ ಜೆ.ಪಿ.ನಡ್ಡಾರವರೇ ಹೇಳಿದ್ದಾರೆ.

**ಸಭಾಪತಿಯವರು:–** ನೀವು ಅದರ ಬಗ್ಗೆ ಮಾತನಾಡುವುದು ಬೇಡ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಪುನಃ ಅದೇ ವಿಷಯವಾಗಿ ಹೇಳುವುದಾದರೆ ಹೇಳೋಣ. ಅದಕ್ಕೇನಂತೆ?

**ಸಭಾಪತಿಯವರು:–** ಆ ವಿಚಾರವಾಗಿ ಮಾತನಾಡಬೇಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, 'India Today' ಎಂಬ ದಿನಪತ್ರಿಕೆಯನ್ನು ಅವರುಗಳು ನೋಡಲಿ. ಆಗ ಗೊತ್ತಾಗುತ್ತದೆ.

**ಸಭಾಪತಿಯವರು:–** ಐದು ನಿಮಿಷಗಳ ಕಾಲ ಪ್ರಶ್ನೋತ್ತರ ಕಲಾಪವನ್ನು ಮುಗಿಸೋಣ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಮಾನ್ಯ ಕೆ.ಎಸ್.ಈಶ್ವರಪ್ಪನವರ ವಿಚಾರವನ್ನು ಪ್ರಸ್ತಾಪಿಸದೇ ಇದ್ದರೆ .....

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾವು ತಮ್ಮ ಬಳಿ ಕಳಕಳಿಯಿಂದ ಪ್ರಾರ್ಥಿಸುವುದೇನೆಂದರೆ, ನಾವು ಕಳೆದ ಇಷ್ಟು ದಿನಗಳಿಂದ ಹೇಳುತ್ತಿರುವುದೇನೆಂದರೆ, **(ಗೊಂದಲ)** ಭಾರತೀಯ ಜನತಾ ಪಕ್ಷದ ಅಧ್ಯಕ್ಷರೇ ಅದನ್ನು ಒಪ್ಪಿಕೊಂಡಿದ್ದಾರೆ. ಇವರುಗಳು ಏನು ಒಪ್ಪಿಕೊಳ್ಳುವುದು?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಗ ಮಾನ್ಯ ಕೆ.ಎಸ್.ಈಶ್ವರಪ್ಪನವರು ಬಂದಿರಲಿಲ್ಲ. ಆಗ ಇದನ್ನು ಹೇಳಿದ್ದರು. **(ಗೊಂದಲ)** ಭಾರತೀಯ ಜನತಾ ಪಕ್ಷದ ಅಧ್ಯಕ್ಷರು ಏನೇನು ಆದೇಶಗಳನ್ನು ನೀಡುತ್ತಾರೋ, ಅವುಗಳೆಲ್ಲವನ್ನೂ ಇವರು ಪಾಲಿಸುತ್ತಾರೆಯೇ? **(ಗೊಂದಲ)** ಹೀಗಾಗಿ ಅವರು ಇದನ್ನು ಏಕೆ ಉಲ್ಲೇಖಿಸುತ್ತಾರೆ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದನ್ನು ಇವರು ಪಾಲಿಸುವುದಿಲ್ಲ.

**ಸಭಾಪತಿಯವರು:-** ಸಭಾನಾಯಕರೇ, ಈಗ ನಮ್ಮ ಮುಂದೆ ಕೇವಲ ಪ್ರಶ್ನೋತ್ತರಗಳ ವಿಚಾರವಷ್ಟೇ ಇವೆ. ಕೇವಲ ಒಂದೆರೆಡು ನಿಮಿಷಗಳ ಕಾಲ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳೋಣವೆಂದು ನಾನು ಹೇಳುತ್ತೇನೆ. ಇಲ್ಲಿಯವರೆಗೆ ಸದನದ ಕಲಾಪಗಳು ನಡೆದಿಲ್ಲ; ಹೀಗಾಗಿ ಕನಿಷ್ಠ ಒಂದು ದಿನವನ್ನಾದರೂ ಸಹ ನಾವು ಮಾಡೋಣ ಎನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ಪ್ರಾರಂಭಿಸಿ.

**(ಗೊಂದಲ)**

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ....

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದರಿಂದ ಅವರಿಗೆ ....

**ಸಭಾಪತಿಯವರು:-** ಯಾರಾರದೂ ಒಬ್ಬರು ಮಾತನಾಡಿ.

**(ಈ ಹಂತದಲ್ಲಿ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಶ್ರೀ ಈಶ್ವರಪ್ಪನವರ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಇವರುಗಳು ತಮ್ಮ ಮನಸ್ಸಿಗೆ ಬಂದ ಹಾಗೆ ಕಿರುಚಾಡುತ್ತಾರೆ. **(ಗೊಂದಲ)** ನಮಗೂ ಸಹ ಇಷ್ಟೇ ಅಧಿಕಾರವಿದೆ. ಕಾಂಗ್ರೆಸ್ಸಿನವರಿಗೋಸ್ಕರ ಇದನ್ನು ತಡೆಹಿಡಿಯುವುದಕ್ಕಾಗುವುದಿಲ್ಲ. ಧರಣಿ ಮಾಡಲು ಹಾಗೂ ಅವರ ಸ್ಥಾನಗಳಿಗೆ ತೆರಳ ಮಾತನಾಡಲು ದಯಮಾಡಿ ಅವಕಾಶ ಮಾಡಿ ಕೊಡಬೇಡಿ. ಪ್ರಶ್ನೋತ್ತರ ಹಾಗೂ ವಿಧೇಯಕಗಳ ಕಲಾಪಗಳನ್ನು ದಯಮಾಡಿ ತೆಗೆದುಕೊಳ್ಳಿ.

**ಸಭಾಪತಿಯವರು:-** ಡಾ॥ ವೈ.ಎ.ನಾರಾಯಣಸ್ವಾಮಿಯವರೇ, ನಿಮ್ಮ ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)**

**02. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 651**

**(ಉತ್ತರವನ್ನು ಲಗತ್ತಿಸಿದೆ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಮಗ್ರವಾದ ಉತ್ತರವನ್ನು ನೀಡಿದ್ದಾರೆ. ಆದರೆ, ಕೋಲಾರ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕಿನಲ್ಲಿ ಬಹಳಷ್ಟು ದೊಡ್ಡ ಹಗರಣಗಳಾಗಿವೆ. ಹೀಗಾಗಿ ಈ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಕೆಲವೇ ಆಯ್ದ ಕ್ಷೇತ್ರಗಳಿಗೆ ನೂರಾರು ಕೋಟಿ ರೂಪಾಯಿಗಳ ಸಾಲವನ್ನು ನೀಡುತ್ತಿದ್ದಾರೆ. ಹೀಗೆ ನೀಡಿದ ಸಾಲವನ್ನು ಡ್ರಾ ಮಾಡಿಕೊಂಡು ಬಂದು ಸಾರ್ವಜನಿಕ ಸಮಾರಂಭಗಳಲ್ಲಿ ಅದನ್ನು ಟೇಬಲ್ ಮೇಲಿಟ್ಟು ಪ್ರದರ್ಶಿಸುತ್ತಾರೆ ಹಾಗೂ ಅವರ ಸ್ವಂತ ಮನೆಯಿಂದ ಹಣ ನೀಡುವ ಮಟ್ಟದಲ್ಲಿ ಬಿಂಬಿಸುತ್ತಿದ್ದಾರೆ. ಈ ಕಾರಣಕ್ಕಾಗಿ ನಾನು ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಇಡೀ ಕೋಲಾರ ಜಿಲ್ಲೆಯಲ್ಲಿರುವ ಡಿ.ಸಿ.ಸಿ. ಬ್ಯಾಂಕಿನಲ್ಲಾಗಿರುವ ಅವ್ಯವಹಾರ ಮತ್ತು ಹಗರಣಗಳ ಬಗ್ಗೆ ಸಂಪೂರ್ಣವಾಗಿ ತನಿಖೆಯನ್ನು ಮಾಡಬೇಕೆಂದು ನಾನು ಮಂತ್ರಿಗಳಲ್ಲಿ ಆಗ್ರಹಿಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಸದಸ್ಯರು ರಾಜ್ಯದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಜನತೆಯ ಪರವಾಗಿ ಈ ಪ್ರಶ್ನೆಯನ್ನು ಕೇಳಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಕೋಲಾರ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕ್ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ – 64 ರಡಿ ಶಾಸನಬದ್ಧ ವಿಚಾರಣೆ ಪ್ರಾರಂಭವಾಗಿದೆ ಹಾಗೂ ಕಲಂ - 65 ರಡಿ ಶಾಸನಬದ್ಧ ಪರಿವೀಕ್ಷಣೆಗೂ ಸಹ ಆದೇಶಿಸಲಾಗಿರುತ್ತದೆ. ಅಲ್ಲಿ ಏನೆಲ್ಲಾ ಅವ್ಯವಹಾರವಾಗಿದೆ, ಅದರ ಬಗ್ಗೆ ಇಲಾಖೆಯ ಮುಖಾಂತರ ತನಿಖೆ ಮಾಡಿಸಲಾಗುತ್ತಿದೆ. ಮುಂದಿನ 10-12 ದಿನಗಳಲ್ಲಿ ಎರಡೂ ವಿಚಾರಣೆಗಳು ಪೂರ್ಣಗೊಳ್ಳುತ್ತವೆ; ಆಗ ನೂರಕ್ಕೆ ನೂರರಷ್ಟು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತಿನ ದಿವಸ ಸದಸ್ಯರು ಮಾಡಿರುವ ಆರೋಪಗಳ ಬಗ್ಗೆ ಎಲ್ಲವನ್ನೂ ಸಹ ತನಿಖೆಗೊಳಪಡಿಸಲಾಗುವುದು. ಸದಸ್ಯರು ನಮ್ಮ ಮೇಲೆ ವಿಶ್ವಾಸವನ್ನಿಡಲಿ; ಆ ಪ್ರಕಾರವಾಗಿ ನಾವು ಕೆಲಸವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 724**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಮುನಿರಾಜು ಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಸರ್ಕಾರವು ಉತ್ತರವನ್ನು ಒದಗಿಸಿದೆ. ಆದರೂ ಸಹ ನಮಗೆ ಕಾಡುತ್ತಿರುವ ಪ್ರಶ್ನೆ ಏನೆಂದರೆ, ಸರ್ಕಾರದ ವತಿಯಿಂದ ಹಾಗೂ ಖಾಸಗಿಯಾಗಿ ನಡೆಸಲಾಗುತ್ತಿರುವ ಒಟ್ಟು 1007 ಮಕ್ಕಳ ಪಾಲನಾ ಕೇಂದ್ರಗಳಲ್ಲಿ ಸುಮಾರು 419 ಹುದ್ದೆಗಳು ಖಾಲಿ ಇವೆ ಎಂದು ತಿಳಿಸಲಾಗಿದೆ. ಸುಮಾರು 18,114 ಮಕ್ಕಳು ಪಾಲನಾ ಕೇಂದ್ರದಲ್ಲಿ ಇರಬೇಕಾದರೆ, ಮಕ್ಕಳ ಪಾಲನಾ ಕೇಂದ್ರದವರು ತಮ್ಮ ಸಹಕಾರವನ್ನು ನೀಡದಿದ್ದರೆ, ಅವರುಗಳಿಗೆ ಯಾವುದೇ ರೀತಿಯಾದ ಮಾರ್ಗದರ್ಶನ ದೊರೆಯಲಿಲ್ಲವೆಂದಾದರೆ, ಆ ಮಕ್ಕಳ ಪರಿಸ್ಥಿತಿ ಏನಾಗಬಹುದು ಎನ್ನುವುದೇ ನನ್ನ ಮೊದಲನೇ ಪ್ರಶ್ನೆಯಾಗಿದೆ.

**ಸಭಾಪತಿಯವರು:-** ನಿಮ್ಮ ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಕೇಳಿ.

**ಶ್ರೀ ಮುನಿರಾಜು ಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಬೇರೆ ಬೇರೆ ಸೇವಾ ಸಂಸ್ಥೆಗಳು ಖಾಸಗಿಯಾಗಿ ನಡೆಸುತ್ತಿರುವ ಪಾಲನಾ ಕೇಂದ್ರಗಳಿಗೆ ಸರ್ಕಾರದಿಂದ ಯಾವುದಾದರೂ ರೀತಿಯಲ್ಲಿ ಅವರುಗಳಿಗೆ ಅನುಕೂಲವಾಗುವಂತಹ ಅನುದಾನಗಳನ್ನು ನೀಡುವ ವ್ಯವಸ್ಥೆ ಏನಾದರೂ ಇದೆಯೇ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಇದರ ಜೊತೆಗೆ ಪಾಲನಾ ಕೇಂದ್ರಗಳಲ್ಲಿರುವ ಮಕ್ಕಳು ದುಃಶ್ಚಟಗಳಿಗೆ ಒಳಗಾಗಿರುವುದು; ಅವರುಗಳಿಗೆ De-Addiction Centres ನ್ನು.... ರಾಜ್ಯದ ಕೇವಲ ಬೆಂಗಳೂರು ನಗರವೊಂದರಲ್ಲಿಯೇ ಮಾತ್ರವೇ De-Addiction Centre ಇರುವುದನ್ನು ನಾವು ನೋಡಿದ್ದೇವೆ. ಹೀಗಾಗಿ ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ರಾಜ್ಯದ ಪ್ರತಿಯೊಂದು ಜಿಲ್ಲೆಗಳಲ್ಲೂ.....

**ಸಭಾಪತಿಯವರು:-** ಸದಸ್ಯರೇ, ಭಾಷಣ ಮಾಡಬೇಡಿ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರದಲ್ಲಿ ತಿಳಿಸಿದಂತೆ, ಸರ್ಕಾರದಿಂದ ನಿರ್ವಹಿಸಲಾಗುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳು 98 ; ಸರ್ಕಾರದ ಸಹಾಯಾನುದಾನದಿಂದ ನಡೆಸಲಾಗುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳು 61 ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತಿರುವ ಮಕ್ಕಳ ಪಾಲನಾ ಕೇಂದ್ರಗಳು 848 ಆಗಿದ್ದು, ಒಟ್ಟು 1007 ಮಕ್ಕಳ ಪಾಲನಾ ಕೇಂದ್ರಗಳಿವೆ. ಈ ಕೇಂದ್ರಗಳಿಗೆ ಸಂಬಂಧಪಟ್ಟಂತೆ, ಸಚಿವರು ಬೇಡಿಕೆ ಇಟ್ಟಂತೆ, ಅಗತ್ಯ ಸೌಕರ್ಯಗಳನ್ನು ನೀಡಲು ಸರ್ಕಾರವು ಇವತ್ತಿನ ದಿವಸ

ಈಗಾಗಲೇ ಇಲಾಖೆಯ ಮೂಲಕ ನಿರ್ದೇಶನಗಳನ್ನು ನೀಡಲಾಗಿದೆ. ಒಟ್ಟಾರೆಯಾಗಿ ಎಲ್ಲಾ ರೀತಿಯ ಮಕ್ಕಳ ಪಾಲನಾ ಕೇಂದ್ರಗಳಲ್ಲಿಯೂ ಸಹ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ನಾನು ಹೇಳಲಿಚ್ಛಿಸುತ್ತೇನೆ.

**ಶ್ರೀ ಮುನಿರಾಜು ಗೌಡ ಪಿ.ಎಂ.:–** ಮಾನ್ಯ ಸಭಾಪತಿಯವರೇ, ಈ ಎಲ್ಲಾ ಪಾಲನಾ ಕೇಂದ್ರಗಳಲ್ಲಿ 18 ವರ್ಷ ತುಂಬಿದ ನಂತರ ಆ ಮಕ್ಕಳಿಗೆ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಯಾವುದೇ ರೀತಿಯಾದ ವ್ಯವಸ್ಥೆಗಳು ಇರುವುದಿಲ್ಲ. ಹೀಗಾಗಿ ಸರ್ಕಾರ ಇದನ್ನೂ ಸಹ ಗಮನಿಸುವ ಕೆಲಸಗಳಾಗಬೇಕು. ಅಲ್ಲಿನ ಮಕ್ಕಳಿಗಾಗಿ De-Addiction Centresನ್ನು ಮಾಡುವುದಕ್ಕಾಗಲಿಲ್ಲವೆಂದಾದರೆ, ಪಾಲನಾ ಕೇಂದ್ರಗಳಲ್ಲಿ ಮಕ್ಕಳಿಗಾಗಿ ಯೋಗ ಮತ್ತು ಧ್ಯಾನ ಕೇಂದ್ರಗಳನ್ನು ಮಾಡುವ ವ್ಯವಸ್ಥೆಗಳನ್ನಾದರೂ ಸರ್ಕಾರದ ವತಿಯಿಂದ ಮಾಡಿಕೊಟ್ಟರೆ, ಉತ್ತಮವಾದ ಬೆಳವಣಿಗೆಯಾಗುತ್ತದೆ ಹಾಗೂ ಅಲ್ಲಿನ ಮಕ್ಕಳಲ್ಲಿ ಶಿಸ್ತು ಬರುತ್ತದೆ ಎನ್ನುವ ಮನವಿಯನ್ನು ನಾನು ಮಾಡುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–** ಮಾನ್ಯ ಸಭಾಪತಿಯವರೇ, ಸದಸ್ಯರು ಈಗ ತಿಳಿಸಿದ ಎರಡು ವ್ಯವಸ್ಥೆಗಳು ಸರ್ಕಾರದ ವತಿಯಿಂದ ಇಲ್ಲ. ಇವುಗಳನ್ನು ಸರ್ಕಾರದ ವತಿಯಿಂದ ನೀಡುವ ಬಗ್ಗೆ ಅಗತ್ಯವಿರುವ ಎಲ್ಲಾ ಪ್ರಯತ್ನಗಳನ್ನು ನಾನು ಮಾಡುತ್ತೇನೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಯು.ಬಿ.ವೆಂಕಟೇಶ್ ರವರದ್ದು.

**ಪ್ರಶ್ನೆ ಸಂಖ್ಯೆ: 747**

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ: 734**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು ಎಂದು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿನ ಎಷ್ಟು ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತಿಸಲಾಗಿದೆ ಎಂಬ ಪ್ರಶ್ನೆಗೂ ಸಹ ಸಚಿವರು ಉತ್ತರಿಸಿದ್ದಾರೆ. ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತಿಸಲು ಬಾಕಿ ಇರುವ ಗ್ರಾಮ ಪಂಚಾಯಿತಿಗಳು ಎಷ್ಟು ಮತ್ತು ಯಾವ ಮಾನದಂಡದ ಆಧಾರದ ಮೇಲೆ ಇವುಗಳನ್ನು ಆಯ್ಕೆ ಮಾಡಲಾಗುತ್ತದೆ ಎಂಬ ಪ್ರಶ್ನೆಗೆ ಉತ್ತರವನ್ನು ಒದಗಿಸಿರುವುದಿಲ್ಲ. ದಯಮಾಡಿ ನಾನು ಕೇಳಿರುವ ಮೂರನೇ ಪ್ರಶ್ನೆಗೂ ಸಹ ಸಚಿವರು ನಂತರದಲ್ಲಿ ಉತ್ತರಿಸಬೇಕೆಂದು ವಿನಂತಿಸುತ್ತೇನೆ.

ಇದರ ಜೊತೆಗೆ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತಿಸಲು ತೆಗೆದುಕೊಂಡಿರುವ ಮಾನದಂಡಗಳಲ್ಲಿ, 2011 ನೇ ಸಾಲಿನ ಜನಗಣತಿಯನ್ನು ಪರಿಶೀಲಿಸಿ ಮೇಲ್ದರ್ಜೆಗೆ ಪರಿವರ್ತನೆ ಮಾಡುವುದು ಇಲ್ಲಿಯವರೆಗೆ ನಡೆದುಕೊಂಡು ಬಂದಿದೆ. ಆದರೆ ಪ್ರಸ್ತುತ ನಾವುಗಳು 2022 ನೇ ಇಸ್ವಿಯಲ್ಲಿರುವ ಸಂದರ್ಭದಲ್ಲಿ, ದಯಮಾಡಿ ಜನಸಂಖ್ಯೆಯ ಆಧಾರದ ಮೇಲೆ ಹಾಲಿ ಇರುವ ಗ್ರಾಮ ಪಂಚಾಯಿತಿಗಳನ್ನೂ ಸಹ ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಬೇಕು ಎನ್ನುವ ವಿನಂತಿಯನ್ನು ತಮ್ಮ ಮೂಲಕ ಸರ್ಕಾರದಲ್ಲಿ ಮಾಡಿಕೊಳ್ಳುತ್ತೇನೆ.

ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತನೆ ಮಾಡಿದಾಗ, ಅಭಿವೃದ್ಧಿ ಕೆಲಸಗಳಿಗೆ ಹೆಚ್ಚು ಅವಕಾಶವಾಗುತ್ತದೆ. ಕಾನೂನು ತೊಡಕಿನಿಂದಾಗಿ ಇನ್ನೂ ಪಟ್ಟಣ ಪಂಚಾಯಿತಿಗಳಾಗಿ ಪರಿವರ್ತನೆಯಾಗದಿರುವ ಗ್ರಾಮ ಪಂಚಾಯಿತಿಗಳ ಅಂಕಿ ಅಂಶಗಳನ್ನು ನೀಡಬೇಕು. ಆದಷ್ಟು ಬೇಗನೇ ಇನ್ನುಳಿದ ಗ್ರಾಮ ಪಂಚಾಯಿತಿಗಳನ್ನೂ ಸಹ ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಬೇಕು.

**(ಮುಂದು)**

**(93) 11.30 22-02-2022 ಸಿಎಸ್/ಎಕೆ**

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:- (ಮುಂದು)**

ಹಾಗೆಯೇ ನನ್ನ 3ನೇ ಯ ಪ್ರಶ್ನೆಗೆ ಉತ್ತರವನ್ನು ಒದಗಿಸಬೇಕೆಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ):-** ಮಾನ್ಯ ಸಭಾಪತಿಗಳೇ, ಗೌರವಾನ್ವಿತ ಶಾಸಕರು ಇಡೀ ರಾಜ್ಯದಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳಿವೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಇಡೀ ರಾಜ್ಯದಲ್ಲಿ 5983 ಗ್ರಾಮ ಪಂಚಾಯಿತಿಗಳಿವೆ ಎನ್ನುವ ಮಾಹಿತಿಯನ್ನು ನಾನು ಉತ್ತರದಲ್ಲಿಯೇ ಒದಗಿಸಿದ್ದೇನೆ. ವಿಜಯನಗರ, ಬಾಗಲಕೋಟೆ ಜಿಲೆಯಲ್ಲಿ ಎಷ್ಟು ಗ್ರಾಮ ಪಂಚಾಯತಿಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ ಎನ್ನುವ ಮಾಹಿತಿಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಭಾಗದಲ್ಲಿ ಅಲ್ಲಿನ ಜನಸಂಖ್ಯೆ ಆಧಾರದ ಮೇಲೆ ನಾವು ಅಲಮೇಲ, ದೇವರ ಹಿಪ್ಪರಗಿ, ನಲತವಾಡ, ನಿಡಗುಂದಿ, ಮನಗೂಳಿ, ಕೋಲ್ಹಾರ, ಚಡಚಣ ಮತ್ತು ತ್ರಿಕೋಟಾ ಈ 8 ಗ್ರಾಮ ಪಂಚಾಯಿತಿಗಳನ್ನು 8 ಪಟ್ಟಣ ಪಂಚಾಯಿತಿಗಳಾನ್ನಾಗಿ ಮೇಲ್ದರ್ಜೇಗೇರಿಸಿರುವ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದ್ದೇವೆ. ಇನ್ನು ಬಾಗಲಕೋಟೆ ಜಿಲ್ಲೆ ಇಳಕಲ್ಲ ತಾಲ್ಲೂಕಿನ ಗೂಡೂರು ಎಸ್.ಸಿ ಗ್ರಾಮ ಪಂಚಾಯಿತಿ ಮತ್ತು ಯಾದಗಿರಿ ಜಿಲ್ಲೆ ವಡಗೇರಾ ತಾಲ್ಲೂಕಿನ ಗ್ರಾಮಪಂಚಾಯಿತಿಗಳ ಬಗ್ಗೆ ಪೌರಾಡಳಿತ ನಿರ್ದೇಶನಾಲಯದಿಂದ ಅರ್ಹ ಪ್ರಸ್ತಾವನೆಗಳು ಸ್ವೀಕೃತವಾದ ನಂತರ ಕರ್ನಾಟಕ ಪುರಸಭೆಗಳ ಅಧಿನಿಯಮ 1964ರನ್ವಯ ಪರಿಶೀಲಿಸಿ ಕ್ರಮ ವಹಿಸಲಾಗುತ್ತದೆ.

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:-** ಮಾನ್ಯ ಸಭಾಪತಿಗಳೇ, ಬಾಗಲಕೋಟೆ ಜಿಲ್ಲೆಯ "ಕಲಾದಿ" ಗ್ರಾಮವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವುದಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅದನ್ನು ಮುಂದಿನ ದಿನಮಾನಗಳಲ್ಲಿ ಮಾಡಿಕೊಡಬೇಕೆಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ):-** ಮಾನ್ಯ ಸಭಾಪತಿಗಳೇ, ಈಗ ಏನು ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ, "ಕಲಾದಿ" ಗ್ರಾಮದ ಜನಸಂಖ್ಯೆ ಆಧಾರದ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ನಾನು ಇಲಾಖೆಗೆ ನಿರ್ದೇಶನ ನೀಡುತ್ತೇನೆ.

**ಪ್ರಶ್ನೆ 743**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಡಗೂರು ಹೆಚ್ ವಿಶ್ವನಾಥ್:-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ನೀಡಿದ್ದಾರೆ. ರಾಜ್ಯ ಅಂಗವಿಕಲರ ಆಯುಕ್ತರ ಹುದ್ದೆಯನ್ನು ಅಂಗವಿಕಲರಿಗೆ ನೀಡಬೇಕು. ಇಲ್ಲದಿದರೆ ಅದು ಅರ್ಥಪೂರ್ಣ ಆಗುವುದಿಲ್ಲ. ಹಿಂದೆ ಈ ಹುದ್ದೆಯನ್ನು ಶ್ರೀ ರಾಜಣ್ಣ ಎನ್ನುವವರಿಗೆ ನೀಡಲಾಗಿದ್ದು, ಅವರು ಬಹಳ ಯಶಸ್ವಿಯಾಗಿ ಈ ಹುದ್ದೆಯನ್ನು ನಿರ್ವಹಿಸಿದ್ದರು. ಈ ಕಾಯಿದೆಗೆ ಒಂದು ತಿದ್ದುಪಡಿಯನ್ನು ತಂದು ರಾಜ್ಯ ಅಂಗವಿಕಲ ಆಯುಕ್ತರ ಹುದ್ದೆಯನ್ನು ಅಂಗವಿಕಲರಿಗೆ ನೀಡಬೇಕೆಂದು ಕಾನೂನು ಜಾರಿಗೆ ತರಬೇಕು. ಹಾಗೆಯೇ ಪ್ರಸಕ್ತ ಸ್ಥಿತಿಯಲ್ಲಿ ಸಂಬಂಧಪಟ್ಟವರನ್ನು ನೇಮಕಾತಿ ಮಾಡಲು ಸರ್ಕಾರ ಬೇರೆ ರೀತಿಯಲ್ಲಿ ಆದೇಶ ಮಾಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯವನ್ನು ಮಾಡುತ್ತೇನೆ.

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಗಳೇ, ಈ ರಾಜ್ಯ ಅಂಗವಿಕಲ ಆಯುಕ್ತರ ಹುದ್ದೆಯನ್ನು ಅಂಗವಿಕಲರಿಗೆ ನೀಡಬೇಕೆನ್ನುವ ಕಾನೂನು ಇಲ್ಲ. ಅವರಿಗೆ ಈ ಹುದ್ದೆಯನ್ನು ನೀಡಬೇಕೆನ್ನುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುವುದು.

**ಶ್ರೀ ಅಡಗೂರು ಹೆಚ್ ವಿಶ್ವನಾಥ್:-** ಹಾಗಾದರೆ ಸದರಿ ಹುದ್ದೆಯನ್ನು ಅಂಗವಿಕಲರಿಗೆ ನೀಡಬೇಕೆಂದು ರಾಜ್ಯ ಅಂಗವಿಕಲರ ಆಯುಕ್ತರು ಆದೇಶ ಏಕೆ ಮಾಡಿದ್ದಾರೆ? ಹಿಂದೆ ಈ ರೀತಿ ಆದೇಶವನ್ನು ಮಾಡಿ, ಅಂಗವಿಕಲರಿಗೆ ಆ ಹುದ್ದೆಯನ್ನು ನೀಡುತ್ತಿದ್ದು, ಅಂತಹವರೇ ಅದರ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಈಗ ಅಂಗವಿಕಲರು ಮಾತ್ರವಲ್ಲ, ಯಾರು ಬೇಕಾದರೂ ಈ ಹುದ್ದೆ ಅಲಂಕರಿಸಬಹುದು ಎಂದರೆ ಅದು ಯಾವ ನ್ಯಾಯ?

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಇದು ಈಗ ಮಾಡಿರುವ ನಿಯಮ ಅಲ್ಲ. ಹಿಂದೆ ಮಾಡಿರುವುದು. ಸರ್ಕಾರ ಇದರ ಬಗ್ಗೆ ಪರಿಶೀಲಿಸುತ್ತದೆ.

**ಪಶ್ನೆ ಸಂಖ್ಯೆ 736**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ 3885 ಕೋಟಿ ರೂಪಾಯಿಗಳನ್ನು 3 ವರ್ಷಗಳ ಅವಧಿಗೆ ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ ನೀಡಲಾಗಿದೆ ಎಂದು ಹೇಳಿದ್ದಾರೆ. ಇನ್ನು 7-8 ತಿಂಗಳ ಸರ್ಕಾರದ ಅಧಿಕಾರದ ಅವಧಿಯಲ್ಲಿ ಈ ಹಣವನ್ನು ಸಂಪೂರ್ಣವಾಗಿ ಹೇಗೆ ಒದಗಿಸಲಾಗುವುದು ಎನ್ನುವ ಸ್ಪಷ್ಟ ಉತ್ತರವನ್ನು ಮಾನ್ಯ ಸಚಿವರು ನೀಡಬೇಕು. 124 ಪುರಸಭೆಗಳನ್ನು ನಗರ ಸ್ಥಳಿಯ ಸಂಸ್ಥೆಗಳಾಗಿ ಮೇಲ್ದರ್ಜೆಗೇರಿಸಲು 1240 ಕೋಟಿ ರೂಪಾಯಿಗಳನ್ನು ಹಂಚಿಕೆಗೆ ಪ್ರಸ್ತಾಪಿಸಲಾಗಿದೆ ಎನ್ನುವ ಉತ್ತರವನ್ನು ನೀಡಿದ್ದಾರೆ. 117 ಪಟ್ಟಣ ಪಂಚಾಯಿತಿಗಳನ್ನು ನಗರ ಸ್ಥಳಿಯ ಸಂಸ್ಥೆಗಳಾಗಿ ಮೇಲ್ದರ್ಜೆಗೇರಿಸಲು 585 ಕೋಟಿ ರೂಪಾಯಿಗಳ ಹಂಚಿಕೆಗೆ ಪ್ರಸ್ತಾಪಿಸಲಾಗಿದೆ ಎನ್ನುವ ಉತ್ತರವನ್ನು ನೀಡಿದ್ದಾರೆ. ಇದರಲ್ಲಿ ಪ್ರತಿ ಪಟ್ಟಣ ಪಂಚಾಯಿತಿಗಳಿಗೆ 5 ಕೋಟಿ ರೂಪಾಯಿಗಳನ್ನು ಪುರಸಭೆಗಳಿಗೆ 10 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಿದರೆ ಇದರಲ್ಲಿ ಏನನ್ನು ಮಾಡಲು ಸಾಧ್ಯ? ಮುಂಬರುವ ದಿವಸಗಳಲ್ಲಿ ಬೇಸಿಗೆ ಕಾಲವನ್ನು ಎದುರಿಸಬೇಕು. ಈ ಅನುದಾನದಲ್ಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಕುಡಿಯುವ ನೀರನ್ನು ಒದಗಿಸಲು ಸಾಕಾಗುವುದಿಲ್ಲ. ಇನ್ನು ಉಳಿದ ಕಾಮಗಾರಿಗಳ ಗತಿಯೇನು ಎನ್ನುವುದರ ಬಗ್ಗೆ ಮಾನ್ಯ ಸಚಿವರು ನನಗೆ ಉತ್ತರವನ್ನು ನೀಡಬೇಕು. ಸ್ಥಳೀಯವಾಗಿ ಪಟ್ಟಣ ಪಂಚಾಯಿತಿಗಳಿಗೆ ಪುರಸಭೆಗಳಿಗೆ ಯಾವುದೇ ರೀತಿಯ ಹೆಚ್ಚಿನ ಆದಾಯ ಇರುವುದಿಲ್ಲ. ಆದ್ದರಿಂದ ಈ ಸಂಸ್ಥೆಗಳು ಸರ್ಕಾರ ನೀಡುವ ಅನುದಾನದ ಮೇಲೆ ಅವಲಂಬಿತವಾಗಿರುತ್ತವೆ. ಆದ್ದರಿಂದ ಸರ್ಕಾರ ದಯಮಾಡಿ ರಾಜ್ಯದ ಪ್ರತಿಯೊಂದು ಪಟ್ಟಣ ಪಂಚಾಯಿತಿಗಳಿಗೆ ಕನಿಷ್ಟ 10 ಕೋಟಿ ರೂಪಾಯಿಗಳನ್ನು ಮತ್ತು ಪುಸಭೆಗಳಿಗೆ ಕನಿಷ್ಟ 20 ಕೋಟಿ ರೂಪಾಯಿಗಳನ್ನು ಒದಗಿಸಿದಲ್ಲಿ ಅವುಗಳಿಗೆ ಸರಿಯಾಗಿ ಕಾರ್ಯ ನಿರ್ವಹಿಸಿಲು ಸಾಧ್ಯವಾಗುತ್ತದೆ. ನನ್ನ ಮತ ಕ್ಷೇತ್ರವಾದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಸ್ಥಳಿಯ ಸಂಸ್ಥೆಗಳಿಗೆ 2021 - 22ನೇ ಸಾಲಿನಲ್ಲಿ 13ನೇ ಹಣಕಾಸಿನ ಕಾರ್ಯಾಧಾರಿತ ಅನುದಾನ 14ನೇ ಹಣಕಾಸಿನ ಯೋಜನೆಯಲ್ಲಿ ಮತ್ತು ಎಸ್ಎಫ್ಎಸ್ಸಿ ಗುಪ್ತನಿಧಿ, ಎಸ್ಎಫ್ಎಸ್ಸಿ ಕುಡಿಯುವ ನೀರಿನ ಅನುದಾನದಲ್ಲಿ ಯಾವ್ಯಾವ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗುವುದು ಎನ್ನುವ ವಿವರಗಳನ್ನು ಮಾನ್ಯ ಸಚಿವರು ನೀಡಬೇಕು. ಮೈಸೂರು ಮತ್ತು

ಚಾಮರಾಜನಗರ ಜಿಲ್ಲೆಗಳಲ್ಲಿರುವ ಪ್ರತಿ ನಗರ ಸಭೆಗಳಿಗೆ 50 ಕೋಟಿಯಂತೆ ಪುರಸಭೆಗಳಿಗೆ 20 ಕೋಟಿಯಂತೆ ಹಾಗೂ ಪಟ್ಟಣ ಪಂಚಾಯಿತಿಗಳಿಗೆ 10 ಕೋಟಿ ರೂಪಾಯಿಗಳಂತೆ ಅನುದಾನವನ್ನು ಬಿಡುಗಡೆ ಮಾಡಿಕೊಡಬೇಕೆಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಸಾರ್ವಜನಿಕರ ಪರವಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಶಾಸಕರು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ನಾನು ಉತ್ತರವನ್ನು ನೀಡಿದ್ದೇನೆ. ಇಡೀ ರಾಜ್ಯದಲ್ಲಿ 302 ಸ್ಥಳೀಯ ಸಂಸ್ಥೆಗಳಿವೆ. ಈ 302 ಸಂಸ್ಥೆಗಳಿಗೂ ಸಹ ಈಗಾಗಲೇ 3885 ಕೋಟಿ ರೂಪಾಯಿಗಳನ್ನು ಈಗಾಗಲೇ ಸರ್ಕಾರ ಬಿಡುಗಡೆ ಮಾಡಿದೆ. ಈ ಹಣವನ್ನು ಜನಸಂಖ್ಯೆ ಆಧಾರದ ಮೇಲೆ ಪಟ್ಟಣಪಂಚಾಯಿತಿಗಳಿಗೆ 5 ಕೋಟಿ ರೂಪಾಯಿಗಳನ್ನು, ಪುರಸಭೆಗಳಿಗೆ 10 ಕೋಟಿ ರೂಪಾಯಿಗಳನ್ನು, ನಗರಸಭೆಗಳಿಗೆ 30 ಕೋಟಿ ರೂಪಾಯಿಗಳನ್ನು, ಜಿಲ್ಲಾ ಕೇಂದ್ರ ನಗರಪ್ರದೇಶಗಳಿಗೆ 40 ಕೋಟಿ ರೂಪಾಯಿಗಳನ್ನು ಹೀಗೆ ಅಲ್ಲಿನ ಜನಸಂಖ್ಯೆ ಆಧಾರದ ಮೇಲೆ 302 ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗಿದೆ. ಪ್ರತಿ ನಗರ ಸಭೆಗಳಿಗೆ ನಾವು ಬ್ರೇಕ್ ಅಫ್ ಮಾಡಿ ಕೊಟ್ಟಿದ್ದೇವೆ. ಇದು ನಗರೋತ್ಥಾನದ 4ನೇ ಹಂತ. ಅದರಲ್ಲಿ ಎಸ್‌ಎಫ್‌ಸಿ ಗುಪ್ತ ನಿಧಿ, ವಿಶೇಷ ಅನುದಾನ 648 ಕೋಟಿ ರೂಪಾಯಿಗಳನ್ನು ಈಗಾಗಲೇ ಸರ್ಕಾರ ಬಿಡುಗಡೆ ಮಾಡಿದೆ. ಹಾಗೆಯೇ ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಸಂಪೂರ್ಣ ಅನುದಾನವನ್ನು ನೀಡಲಾಗಿದ್ದು, ಇದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ನೀಡತಕ್ಕ ಅನುದಾನ. 14ನೇ ಹಣಕಾಸಿನ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ಕೂಡ ಅನುದಾನ ಬಿಡುಗಡೆ ಆಗಿದೆ. ಮೈಸೂರು ಜಿಲ್ಲೆಗಳಲ್ಲಿ ಯಾವ್ಯಾವ ಪಂಚಾಯಿತಿಗಳಿಗೆ ಅನುದಾನ ನೀಡಲಾಗಿದೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಮೈಸೂರು ಜಿಲ್ಲೆಯ ಹುಣಸೂರು, ನಂಜನಗೂಡು, ಹೂಟಗಳ್ಳಿ, ಕೆ.ಆರ್.ನಗರ, ಬನ್ನೂರು, ಟಿ.ನರಸೀಪುರ, ಪಿರಿಯಾಪಟ್ಟಣ, ಹೆಚ್.ಡಿ ಕೋಟೆ, ಸರಗನೂರು ಈ ಎಲ್ಲಾ ಪಟ್ಟಣ ಪಂಚಾಯಿತಿಗಳಿಗೂ ಸಹ ನಾವು ಸಮನಾಗಿ ಅನುದಾನವನ್ನು ಹಂಚಿಕೆ ಮಾಡಿದ್ದೇನೆ.

(ಮುಂದು)

(94)/22-2-2022/11-40/ಎಲ್ಎಂ/ಆರ್ಎನ್

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ.)**(ಮುಂದು):-

ಮಾನ್ಯ ಸದಸ್ಯರಿಗೆ ಇನ್ನು ಹೆಚ್ಚಿನ ವಿವರ ಬೇಕಾದರೆ ಒದಗಿಸಿಕೊಡುತ್ತೇವೆ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಗಳೆ, 3,885 ಕೋಟಿ ರೂಪಾಯಿಗಳನ್ನು ಸುಮಾರು ಮೂರು ವರ್ಷಗಳ ಅವಧಿಗೆ ಕೊಡಲಾಗಿದೆ ಎಂದು ತಿಳಸಿದ್ದಾರೆ. ಆದರೆ ಸರ್ಕಾರ ಇನ್ನು 8 ರಿಂದ 10 ತಿಂಗಳ ಕಾಲ ಮಾತ್ರ ಇರುತ್ತದೆ. ಈಗ ಇರುವ ಇಷ್ಟು ಅವಧಿಗೆ ಎಷ್ಟು ಹಣವನ್ನು ಕೊಡಲಾಗಿದೆ ಎನ್ನುವುದನ್ನು ತಿಳಸಬೇಕು. 124 ಸಂಸ್ಥೆಗಳಗೆ 1,240 ಕೋಟಿ ರೂಪಾಯಿಗಳನ್ನು ನೀಡಲಾಗಿದೆ ಎಂದು ಹೇಳದ್ದಾರೆ. ಆದರೆ ಇದಕ್ಕೆ ಯಾವುದೆ ರೀತಿಯ ಅಂಕಿ-ಅಂಶಗಳು ಇಲ್ಲ. ಈಗ ಹೊಸದಾಗಿ ಬಂದಿರುವ ಪಟ್ಟಣ ಪಂಚಾಯಿತಿಗಳಗೆ ಇವರು ಕೊಡುವ 5 ಕೋಟಿ ರೂಪಾಯಿಗಳು ಯಾವುದಕ್ಕೂ ಸಾಕಾಗುವುದಿಲ್ಲ. ಇವತ್ತು ಪಟ್ಟಣ ಪಂಚಾಯಿತಿಗಳಲ್ಲಿ 20,000 ರಿಂದ 25,000 ವರೆಗೆ ಜನಸಂಖ್ಯೆ ಇದೆ.

(**ಈ ಹಂತದಲ್ಲಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಪಕ್ಷದ ಸದಸ್ಯರು ಘೋಷಣೆಯನ್ನು ಕೂಗುತ್ತಿದ್ದರು**)

**ಶ್ರೀ ಎನ್.ನಾಗರಾಜ್, ಎಂ.ಟಿ.ಬಿ.:-** ಮಾನ್ಯ ಸಭಾಪತಿಗಳೆ, 2016-17, 2017-18, 2018-19, 2019-20, 2020-21ನೇ ಸಾಲಿಗೆ ಮೂರನೇ ಹಂತ ಮುಕ್ತಾಯವಾಯಿತು. ಸ್ವಾತಂತ್ರ ಬಂದು 76ನೇ ವರ್ಷದ ಸುವರ್ಣ ಮಹೋತ್ಸವದ ಸಮಯವಾಗಿರುವುದರಿಂದ ಈ ವರ್ಷ 3,858 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಕೊಟ್ಟಿದೆ. ಮಾನ್ಯ ಸದಸ್ಯರು ಪಟ್ಟಣ ಪಂಚಾಯಿತಿಗೆ ಕೊಟ್ಟಿರುವ 5 ಕೋಟಿ ರೂಪಾಯಿಗಳು ಸಾಗಾಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಪುರಸಭೆಗಳಗೆ ಕೊಟ್ಟಿರುವ 10 ಕೋಟಿ ರೂಪಾಯಿಗಳು ಕಡಿಮೆ ಹಣವಾಗಿದೆ ಎಂದು ಹೇಳದ್ದಾರೆ. ಕೊಟ್ಟಿರುವ ಹಣ ಕಡಿಮೆಯಾಗಿದೆ ಎನ್ನುವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಪಟ್ಟಣ ಪಂಚಾಯಿತಿಗಳಗೆ 2 ಕೋಟಿ ರೂಪಾಯಿಗಳನ್ನು, ಪುರಸಭೆಗಳಗೆ 10 ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಬೇಕು ಮತ್ತು ಗ್ರೇಡ್ ಒನ್ ಪುರಸಭೆಗಳಗೆ 5 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಗೆ ಮನವಿಯನ್ನು ಕೊಟ್ಟಿದ್ದೇನೆ. ಮುಂದಿನ ದಿನಗಳಲ್ಲಿ ಇದನ್ನು ಪರಿಶೀಲನೆ ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 645**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ ಇದರಲ್ಲಿ ಕೊಟ್ಟಿರುವ ಅಂಕಿ-ಅಂಶಗಳನ್ನು ಗಮನಿಸಲು ಸಮಯದ ಅಭಾವವಿದೆ. ಆದರೂ ಕೂಡಾ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವುದು, ರಾಜ್ಯ ಯೋಜನಾ ಕಾರ್ಯಕ್ರಮದಡಿಯಲ್ಲಿ 32 ಕುಡಿಯುವ ನೀರು ಸರಬರಾಜು ಯೋಜನೆ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಡಿ 18 ಕುಡಿಯುವ ನೀರು ಸರಬಾಜು ಯೋಜನೆಗಳು ಒಳಗೊಂಡಿರುತ್ತವೆ. ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ ಎಂದು ಹೇಳಿದ್ದಾರೆ. ರಾಜ್ಯದ 32 ಮತ್ತು ಕೇಂದ್ರ ಪುರಸ್ಕೃತ 18 ಕುಡಿಯುವ ನೀರಿನ ಯೋಜನೆಗಳು ಚಾಲನೆಯಲ್ಲಿವೆ ಎಂದು ಹೇಳಿದ್ದಾರೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ನಾವು ಇನ್ನು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಇವತ್ತು ಪ್ರತಿಯೊಂದು ಮನೆಯಲ್ಲಿ ಬೋರ್‌ವೆಲ್‌ನ ನೀರು ಉಪಯೋಗಿಸಲಾಗುತ್ತಿದೆ. ಆದರೆ ನಿರಂತರವಾಗಿ ಬೋರ್‌ವೆಲ್ ನೀರು ನಮಗೆ ಸಿಗುವುದಿಲ್ಲ. ಅಂತರ್ಜಲ ಖಾಲಿಯಾದಾಗ ಎಲ್ಲಾ ಬೋರ್‌ವೆಲ್‌ಗಳ ನೀರು ಖಾಲಿಯಾಗುತ್ತದೆ. ಆದ್ದರಿಂದ ನದಿಗಳಿಂದ ನೀರು ಕೊಡುವ ವ್ಯವಸ್ಥೆಯನ್ನು ಮತ್ತು ಮಳೆನೀರನ್ನು ಸಂಗ್ರಹಿಸಿ ಅದರಿಂದ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಹೆಚ್ಚು ಒತ್ತು ಕೊಟ್ಟು ಮಾಡಬೇಕೆಂದು ಸರ್ಕಾರಕ್ಕೆ ವಿನಂತಿಸುತ್ತೇನೆ. ಇದೆಲ್ಲವನ್ನು ಮಾಡಬೇಕಾದರೆ ಹಣದ ಕೊರತೆ ಇದೆ ಎಂದು ಸರ್ಕಾರ ಹೇಳುತ್ತದೆ. ಕೊನೆ ಪಕ್ಷ ಮಳೆ ನೀರನ್ನಾದರೂ ಸಂಗ್ರಹಿಸಿ ಅದರ ಮರುಬಳಕೆ ಮಾಡಿಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಲು ಸರ್ಕಾರದಲ್ಲಿ ಏನಾದರೂ ಕಾರ್ಯಕ್ರಮವಿದೆಯೇ ಎನ್ನುವುದನ್ನು ತಮ್ಮ ಮುಖಾಂತರ ಕೇಳುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಗಳೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಪ್ರಸ್ತುತ ರಾಜ್ಯದಲ್ಲಿ ಒಟ್ಟಾರೆ 50 ಕುಡಿಯುವ ನೀರು ಸರಬರಾಜು ಯೋಜನೆಯನ್ನು ಮಂಡಳಿಯಿಂದ ಅನುಷ್ಠಾನಗೊಳಿಸಲಾಗಿದೆ. ರಾಜ್ಯ ಯೋಜನಾ ಕಾರ್ಯಕ್ರಮದಡಿಯಲ್ಲಿ 32 ಕುಡಿಯುವ ನೀರು ಸರಬರಾಜು ಯೋಜನೆ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಡಿ 18 ಕುಡಿಯುವ ನೀರು ಸರಬಾಜು ಯೋಜನೆಗಳನ್ನು ಇಂದು ತೆಗೆದುಕೊಂಡಿದ್ದು, ಈಗ ಆ ಯೋಜನೆಗಳು ಮುಕ್ತಾಯವಾಗುವ ಹಂತಕ್ಕೆ ಬಂದಿದೆ. ಇದು ಅಲ್ಲದೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ 22 ನಗರಗಳಿಗೆ ಕುಡಿಯುವ ನೀರನ್ನು ಒದಗಿಸುವಂತಹ ಯೋಜನೆಯನ್ನು ಕೈಗೆತ್ತಿಗೊಂಡಿದ್ದೇವೆ. ಎಲ್ಲೆಲ್ಲಿ ನದಿ ನೀರಿನ ಲಭ್ಯತೆ ಇದೆ ಅದರ ಆಧಾರದ ಮೇಲೆ ಕಾರ್ಯಕ್ರಮವನ್ನು

ರೂಪಿಸಿಕೊಳ್ಳುತ್ತಿದ್ದೇವೆ. ನದಿ ನೀರು ಲಭ್ಯತೆ ಇಲ್ಲದ ಕಡೆಗಳಲ್ಲಿ ಬೋರ್‌ವೆಲ್ ಮುಖಾಂತರ ನೀರನ್ನು ಒದಗಿಸುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಪರಿಣಾಮಕಾರಿಯಾದ ಕೆಲಸಗಳನ್ನು ಸರ್ಕಾರ ಮಾಡುತ್ತದೆ. ಕುಡಿಯುವ ನೀರಿನ ಯೋಜನೆಯಲ್ಲಿ ಹಲವಾರು ನಗರಗಳನ್ನು ಸೇರಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಈ ವರ್ಷದ ಬಜೆಟ್‌ನಲ್ಲಿ 1,500 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ ಯೋಜನೆಗಾಗಿ ಮೀಸಲಿಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ನಮ್ಮ ರಾಜ್ಯದ ಜನರಿಗೆ ಕುಡಿಯುವ ನೀರನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಈ ಸಾಲಿನ ಬಜೆಟ್‌ನಲ್ಲಿ ಎಲ್ಲವನ್ನು ಸೇರಿಸಿಕೊಂಡು ಅನುದಾನವನ್ನು ಕೊಡಲಾಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ನದಿ ನೀರು ಎಲ್ಲಿ ಲಭ್ಯತೆ ಇದೆ ಅದರ ಆಧಾರದ ಮೇಲೆ ಸರ್ಕಾರ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತದೆ ಎಂದು ಹೇಳಬಯಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಗಳೆ, ಎಲ್ಲೆಲ್ಲಿ ನದಿ ನೀರಿನ ಲಭ್ಯತೆ ಇದೆ, ಅಲ್ಲಿ ನದಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತದೆ, ಎಲ್ಲಿ ನದಿ ನೀರಿನ ಲಭ್ಯತೆ ಇಲ್ಲ, ಅಲ್ಲಿ ಕೊಳವೆ ಬಾವಿಯಿಂದ ಕುಡಿಯುವ ನೀರನ್ನು ಒದಗಿಸಲಾಗುತ್ತದೆ ಎಂದು ಹೇಳುತ್ತಿದ್ದಾರೆ. ಆದರೆ ಕೋಲಾರ ಜಿಲ್ಲೆಯಲ್ಲಿ ಪ್ರತಿಯೊಂದು ಮನೆಯಲ್ಲಿ ಕೊಳವೆ ಬಾವಿಗಳು ಇವೆ. ಆದರೆ ಅಲ್ಲಿ ನೀರೆ ಇಲ್ಲ. ಅಂತರ್ಜಲದ ಮಟ್ಟ ಕುಸಿದಿದೆ. ಕರೆಂಟ್ ಹೆಚ್ಚು ಕೊಡಲು ಆಗುತ್ತಿಲ್ಲ ಎಂದು ಸೋಲಾರ್ ಪದ್ಧತಿಯನ್ನು ತರಲಾಯಿತು. ಅದೇ ರೀತಿ ಮಳೆ ನೀರನ್ನು ಸಂಗ್ರಹಿಸಿ ಅಂತರ್ಜಲದ ಮಟ್ಟವನ್ನು ಹೆಚ್ಚಿಸಿ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸರ್ಕಾರ ಏಕೆ ಒತ್ತನ್ನು ಕೊಡಬಾರದು? ಪ್ರಕೃತಿ ನಮಗೆ ಪ್ರತಿ ವರ್ಷ ಮಳೆಯನ್ನು ಕೊಡುತ್ತದೆ. ಇದಕ್ಕೆ ಪೂರಕವಾಗಿ ಸರ್ಕಾರ ಏನಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆಯೇ ಎನ್ನುವುದನ್ನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಬಯಸುತ್ತೇನೆ.

**ಶ್ರೀ ಬಿ.ಎ.ಬಸವರಾಜು:-** ಮಾನ್ಯ ಸಭಾಪತಿಗಳೆ, ನಗರದಲ್ಲಿ ಪ್ರತಿ ದಿನಕ್ಕೆ ಒಬ್ಬರಿಗೆ ದಿನಕ್ಕೆ 135 ಲೀಟರ್ ನೀರನ್ನು ಒದಗಿಸಬೇಕೆಂದು ನಮಗೆ ಕೇಂದ್ರ ಸರ್ಕಾರದ ಮಾನದಂಡವಿದೆ. ಆ ಸೂಚನೆ ಮೇರೆಗೆ ಇವತ್ತು ಪ್ರತಿ ನಗರಕ್ಕೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಬೋರವೆಲ್‌ನಲ್ಲಿ ನೀರು ಬರದಿದ್ದರೆ ಟ್ಯಾಂಕರ್ ಮುಖಾಂತರ ನೀರನ್ನು ಒದಗಿಸಲಾಗುತ್ತಿದೆ. ನೀರು ಲಭ್ಯತೆ ಇರುವ ಕಡೆಗಳಲ್ಲಿ

ಬೋರ್‌ವೆಲ್‌ಗಳನ್ನು ಕೊರೆಸಿ ನೀರನ್ನು ಒದಗಿಸುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ. ನೀರೆ ಇಲ್ಲದ ಕಡೆ ಏನು ಮಾಡಲು ಆಗುವುದಿಲ್ಲ. ಮಳೆ ನೀರನ್ನು ಸಂಗ್ರಹಿಸುವಂತಹ ಯೋಜನೆಗಳನ್ನು ಸರ್ಕಾರ ಹಾಕಿಕೊಂಡಿದೆ. ಮಾನ್ಯ ಸದಸ್ಯರು ಹೇಳಿರುವ ಪ್ರಕಾರ ಮುಂದಿನ ದಿನಗಳಲ್ಲಿ ಪರಿಣಾಮಕಾರಿಯಾದ ಯೋಜನೆಗಳನ್ನು ಹಾಕಿಕೊಳ್ಳಲು ಸರ್ಕಾರ ಬದ್ಧವಾಗಿದೆ ಎನ್ನುವುದನ್ನು ಹೇಳಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ: 677**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರುದ್ರೇಗೌಡ:-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಒದಗಿಸಿದ್ದಾರೆ. ಸರ್ಕಾರ ಈಗಾಗಲೇ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದೆ. ನನ್ನ ಪ್ರಶ್ನೆ ಎಂದರೆ, ಶಿವಮೊಗ್ಗ, ಬೆಳಗಾವಿಯಂತಹ ನಗರಗಳಲ್ಲಿ ಎಲ್ಲಿ ಕಾರ್ಖಾನೆಗಳಲ್ಲಿ ಮರಳು ಸಂಬಂದಿತ ತ್ಯಾಜ್ಯ ಉತ್ಪತ್ತಿಯಾಗುತ್ತದೆ, ಇಂತಹ ಸ್ಥಳಗಳಲ್ಲಿ ದೊಡ್ಡ-ದೊಡ್ಡ ಅಗಲ ಮತ್ತು ಉದ್ದವಾದ ಗುಂಡಿಗಳು ನಿರ್ಮಾಣವಾಗಿರುತ್ತವೆ. ಈ ಗುಂಡಿಗಳನ್ನು ತುಂಬಲು ಸರ್ಕಾರ ಅವಕಾಶ ಮಾಡಿಕೊಡಬೇಕು. 3,458.85 ಲಕ್ಷ ರೂಪಾಯಿಗಳನ್ನು ಗುಂಡಿ ಮುಚ್ಚಲು ಸರ್ಕಾರ ಖರ್ಚು ಮಾಡುತ್ತಿದೆ. ಮರಲು ಮತ್ತು ಮಣ್ಣನ್ನು ಸೇರಿಸಿ Mouldಗಳನ್ನು ಮಾಡುತ್ತಾರೆ. ಆ Mouldಗಳನ್ನು ಸುಟ್ಟಾಗ ಆ ಮಣ್ಣು ಅಲ್ಲಿಯೇ ಉದುರುತ್ತದೆ. ಉದುರಿರುವ ಮಣ್ಣನ್ನು ಎತ್ತಿ ಗುಂಡಿಗೆ ಹಾಕಿದರೆ ಪರಿಸರ ಹಾನಿಯಾಗುವುದಿಲ್ಲ, ಗುಂಡಿಗಳು ಮುಚ್ಚುತ್ತವೆ, ಸರ್ಕಾರದ ಹಣವು ಉಳಿಯುತ್ತದೆ. ಈ ಬೇಡಿಕೆಯನ್ನು ಇಟ್ಟುಕೊಂಡು ನಾವು ಜಿಲ್ಲಾಮಟ್ಟದಲ್ಲಿ ಸುಮಾರು ಎರಡು ವರ್ಷಗಳಿಂದ ಹೋರಾಡುತ್ತಿದ್ದೇವೆ. ಹೀಗಾಗಿ ದೊಡ್ಡ ನಗರಗಳಲ್ಲಿ ಈ ಗಣಿಗಾರಿಕೆಯಿಂದ ಉಂಟಾಗಿರುವ ಗುಂಡಿಗಳನ್ನು ಮುಚ್ಚಲು ಅವಕಾಶ ಮಾಡಿಕೊಡಬೇಕಾಗಿ ಸರ್ಕಾರದಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಗಳೆ, ಕಲ್ಲು ಗಣಿಗಾರಿಕೆಯಿಂದ ಉಂಟಾಗಿರುವ ದೊಡ್ಡ ಗುಂಡಿಗಳನ್ನು ಮುಚ್ಚಲು 2015ರಲ್ಲಿ ಹೈಕೋರ್ಟ್‌ನಿಂದ ಆದೇಶವಾದಾಗ 3458.85 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 97 ಗುಂಡಿಗಳನ್ನು ಮುಚ್ಚಲು ಆಗ ಸರ್ಕಾರ ಕ್ರಮ ತೆಗೆದುಕೊಂಡಿತ್ತು. ಸರ್ಕಾರ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ, ಇನ್ನು ಮುಂದೆ ಗಣಿಗಾರಿಕೆ ಮಾಡುವವರು ಗುಂಡಿಗಳನ್ನು ಮುಚ್ಚದೆ ಹಾಗೆ ಹೋಗಬಾರದು ಎಂದು ನಿಯಮಗಳಲ್ಲಿ ಬದಲಾವಣೆ ಮಾಡಿ ಗಣಿಗಾರಿಕೆ ಮಾಡುವವರು ಸರ್ಕಾರಕ್ಕೆ ಕಟ್ಟುವ ಹಣದಲ್ಲಿ 10% ಬ್ಯಾಂಕ್ ಗ್ಯಾರಂಟಿ ಇಟ್ಟು Mining Closure Plan ನ್ನು ಅವರು ಕಡ್ಡಾಯವಾಗಿ ತೆಗೆದುಕೊಳ್ಳಬೇಕಾಗಿತ್ತು. ಇದನ್ನು ಕಟ್ಟುನಿಟ್ಟಾಗಿ ಅನುಸರಿಸಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಗಣಿಗಾರಿಕೆ ಮಾಡಿ ಅವರು ಗುಂಡಿಗಳನ್ನು ಹಾಗೆ ಬಿಟ್ಟು ಹೋದರೆ ಅವರು ಇಟ್ಟ ಬ್ಯಾಂಕ್ ಗ್ಯಾರಂಟಿ ಹಣದಲ್ಲಿಯೇ ಇಲಾಖೆ ಗುಂಡಿಗಳನ್ನು ಮುಚ್ಚುವಂತಹ ಕೆಲಸವನ್ನು ಮಾಡುತ್ತದೆ.

**(ಮುಂದು)**

(095)22-02-2022(11-50)**bsd-rn**

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಬಾವಿಯಲ್ಲಿ ಧರಣಿ ನಿರತರಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಆಚಾರ ಹಾಲಪ್ಪ ಬಸಪ್ಪ** (ಮುಂದು):

ಕಾರ್ಖಾನೆಯಿಂದ ಬರುವ ಕಬ್ಬಿಣ ಮತ್ತು ಉಕ್ಕು ಮಿಶ್ರಿತ ಮರಳು ತ್ಯಾಜ್ಯವನ್ನು ಗುಂಡಿಗಳಿಗೆ ಹಾಕುವ ಬಗ್ಗೆ ಪ್ರಸ್ತಾಪಿಸಿದ್ದು, ಇದರ ಬಗ್ಗೆ ಇಲ್ಲಿಯವರೆಗೂ ಸರ್ಕಾರದ ಪರಿಶೀಲನೆಯಲ್ಲಿ ಇರಲಿಲ್ಲ, ಈಗ ಮಾನ್ಯ ಸದಸ್ಯರು ಅದರ ಬಗ್ಗೆ ಗಮನಕ್ಕೆ ತಂದಿದ್ದು, ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಇದಲ್ಲದೇ ಪರಿಸರ ಇಲಾಖೆಯ ಅನುಮತಿ ಬೇಕಾಗುತ್ತದೆ ಹಾಗೂ ಇಲಾಖೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿ, ಮಾನ್ಯ ಸದಸ್ಯರ ಕಾಳಜಿಯನ್ನು ಪರಿಗಣಿಸಿ, ಸಾಧ್ಯತೆಯಿದ್ದರೆ ಅನುಕೂಲ ಮಾಡಿಕೊಡುತ್ತೇನೆ ಎಂದು ಹೇಳಬಯಸುತ್ತೇನೆ.

**ಶ್ರೀ ಎಸ್. ರುದ್ರೇಗೌಡ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನು ಪರಿಸರ ಇಲಾಖೆಯೊಡನೆ ಚರ್ಚೆ ಮಾಡಿ ಪ್ರಸ್ತಾವನೆಯನ್ನು ತಯಾರು ಮಾಡಿದ್ದೇನೆ. Infiltered water ಕೂಡ ಯಾವುದೇ ರೀತಿಯ ತೊಂದರೆ ಮಾಡುವುದಿಲ್ಲ. ಶಿವಮೊಗ್ಗದಲ್ಲಿ ಮಾಚೇನಹಳ್ಳಿ ಎಂಬ ಕೈಗಾರಿಕಾ ಪ್ರದೇಶದ ಸುತ್ತಮುತ್ತ ಸುಮಾರು 10 ವರ್ಷಗಳವರೆಗೂ ಮರಳು ತುಂಬಬಹುದಾದ ದೊಡ್ಡ ದೊಡ್ಡ ಗುಂಡಿಗಳಿದ್ದು, ಈ ಗುಂಡಿಗಳಿಗೆ ಏನೂ ಹಾಕದೇ ಯಾವುದೇ ರೀತಿಯ ಸುರಕ್ಷತೆಯನ್ನು ಮಾಡಿರುವುದಿಲ್ಲ. ದಯಮಾಡಿ ಇದನ್ನು ಧನಾತ್ಮಕವಾಗಿ ತೆಗೆದುಕೊಂಡು ವೇಸ್ಟ್ ಹಾಕಲು ಮತ್ತು ಸರ್ಕಾರದ ಹಣ ಉಳಿಸಲು ಪ್ರಯತ್ನ ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಪರಿಸರ ಇಲಾಖೆಯೊಡನೆ ಚರ್ಚೆ ಮಾಡಿ ವರದಿ ತಯಾರು ಮಾಡಿರುವ ಬಗ್ಗೆ ಮಾನ್ಯ ಸದಸ್ಯರು ತಿಳಿಸಿದ್ದು, ನಾನೂ ಕೂಡ ಅವರೊಡನೆ ಚರ್ಚೆ ಮಾಡಿ, ವರದಿಯನ್ನು ತರಿಸಿಕೊಂಡು ಪೂರಕವಾಗಿ ಆಲೋಚನೆ ಮಾಡುತ್ತೇನೆ.

**ಸಭಾಪತಿಯವರು:-** ಶ್ರೀ ದಿನೇಶ್ ಗೂಳಿಗೌಡ ರವರ ಪ್ರಶ್ನೆ ಸಂಖ್ಯೆ 704 ಕೇಳಲು ಅವರು ಇಲ್ಲ, ಶ್ರೀ ಗೋವಿಂದರಾಜು ರವರು ಪ್ರಶ್ನೆ ಕೇಳಿ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 696**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ 1958ನೇ ಇಸವಿಯಿಂದ 729 ಉಗ್ರಾಣಗಳನ್ನು ನಿರ್ಮಾಣ ಮಾಡಿರುವ ಬಗ್ಗೆ ತಿಳಿಸಿದ್ದು, ಇದರಲ್ಲಿ ಕೇಂದ್ರ ಕೃಷಿ ವಿಕಾಸ ಯೋಜನೆಯಡಿ 176 ಉಗ್ರಾಣಗಳನ್ನು ನಿರ್ಮಾಣ ಮಾಡಿರುವ ಬಗ್ಗೆ ನನ್ನ ಪ್ರಶ್ನೆಗೆ ಉತ್ತರ ನೀಡಿದ್ದಾರೆ. ಕೇವಲ 89 ಉಗ್ರಾಣಗಳನ್ನು ನಿರ್ಮಾಣ ಮಾಡಿ ರೂ.612 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಈ ಅವಧಿಯಲ್ಲಿ ಅವ್ಯವಹಾರ ಆಗಿರುವ ಬಗ್ಗೆಯೂ ಇಲ್ಲ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ಅವ್ಯವಹಾರಕ್ಕೆ 6 ಜನ ಅಧಿಕಾರಿಗಳು ಕಾರಣ ಎಂದು ಜಿಲ್ಲಾ ನ್ಯಾಯಾಧೀಶರ ನೇತೃತ್ವದ ತನಿಖೆಯಲ್ಲಿ ಗೊತ್ತಾಗಿದೆ. ಈ 6 ಅಧಿಕಾರಿಗಳ ವಿರುದ್ಧ ಇಲ್ಲಿಯವರೆಗೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂಬ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. ಇದಕ್ಕೆ ಉತ್ತರವನ್ನು ನೀಡಿರುವುದಿಲ್ಲ. ಈ ಉಗ್ರಾಣ ನಿರ್ಮಾಣಕ್ಕೆ 2016 ರಲ್ಲಿ ಕಾರ್ಯಾದೇಶ ನೀಡಿದ್ದು, 176 ಉಗ್ರಾಣಗಳನ್ನು ಒಂದೇ ಸಂಸ್ಥೆಗೆ ನೀಡಲಾಗಿದೆ. ಇದರಿಂದ Karnataka State Warehousing Corporation ಗೆ ನಷ್ಟವಾಗಿದೆ ಎಂದು ಉಗ್ರಾಣ ನಿಗಮದ ಅಧ್ಯಕ್ಷರಾಗಿರುವ ಮಾನ್ಯ ಯು.ಬಿ. ಬಣಕಾರ್ ರವರು ವಿಜಯ ಕರ್ನಾಟಕ ಪತ್ರಿಕೆಯ ವರದಿಯಲ್ಲಿ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆಯಂತೆ "ಉಗ್ರಾಣಗಳ ಸಂಖ್ಯೆಯನ್ನು ಏಕಾಏಕಿ ದ್ವಿಗುಣ ಮಾಡಲು ಕೈಗೊಂಡ ತೀರ್ಮಾನವೇ ನಿಗಮದ ನಷ್ಟಕ್ಕೆ ಕಾರಣವಾಗಿದ್ದು, ರಾಜ್ಯಾದ್ಯಂತ ಏಕೈಕ ಟೆಂಡರ್ ನೀಡುವ ಬದಲಾಗಿ ಯೂನಿಟ್ ಆಧಾರದ ಟೆಂಡರ್ ನೀಡಿದ್ದರೆ ಸಮಸ್ಯೆ ಜಟಿಲಗೊಳ್ಳುತ್ತಿರಲಿಲ್ಲ" ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಪೂರ್ಣ ಮಾಹಿತಿಯನ್ನು ಕೊಟ್ಟಿದ್ದೇವೆ. ಅವರು ಹೇಳಿದ ಮಾಹಿತಿ ಜೊತೆಗೆ ಅವ್ಯವಹಾರದ ಬಗ್ಗೆ ಪ್ರಸ್ತಾಪಿಸಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ತನಿಖೆ ನಡೆಯುತ್ತಿದ್ದು, 6 ಅಧಿಕಾರಿಗಳ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಧಿಕಾರಿಗಳು, ಗುತ್ತಿಗೆದಾರರ ಜೊತೆ 2-3 ಸಭೆಗಳು ಆಗಿದ್ದು, ಸದ್ಯದಲ್ಲಿ ಇದನ್ನು ಸರಿಪಡಿಸುವ ಕೆಲಸ ಮಾಡುತ್ತೇನೆ. ಇನ್ನೂ ರೂ.362 ಕೋಟಿ ಅನುದಾನ

ಬರಬೇಕಾಗಿದ್ದು, ಈಗ ರೂ.612 ಕೋಟಿಗಳನ್ನು ಕೊಟ್ಟಿದ್ದಾರೆ. ಉಳಿದ ಬಾಕಿ ಹಣವನ್ನು ಕೊಟ್ಟು ಎಲ್ಲವನ್ನು ಸರಿಪಡಿಸುವ ಕೆಲಸ ಆಗುತ್ತದೆ.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಈಗಾಗಲೇ Karnataka State Warehousing Corporation ನಲ್ಲಿ ನಬಾರ್ಡ್ ಸಂಸ್ಥೆಯಿಂದ ಮಾಸಿಕ ರೂ.30 ಕೋಟಿ ಬಡ್ಡಿ ಹೊರೆ ಬೀಳುತ್ತಿದ್ದು, ಆದಷ್ಟು ಬೇಗ ಯೋಜನೆ ಕೈಗೊಂಡು ಫಲಾನುಭವಿಗಳಿಗೆ ಸಿಗುವಂತೆ ಮಾಡಿದರೆ ಕೃಷಿ ವಲಯಕ್ಕೆ ಆದ್ಯತೆ ಮೇಲೆ ಅನುಕೂಲವಾಗುತ್ತದೆ. ಆ ಸಂಸ್ಥೆ ನಷ್ಟದಿಂದ ಪಾರಾಗಲು ಅವಕಾಶವಾಗುತ್ತದೆ ಎಂದು ಹೇಳುತ್ತೇನೆ. ಜೊತೆಗೆ ಅವರ ವಿರುದ್ಧ ಕ್ರಮ ಕೈಗೊಳ್ಳುವುದರ ಜೊತೆಗೆ ಆಗಬೇಕಾಗಿರುವ Warehouse ಗಳು ಶೀಘ್ರವಾಗಿ ಆಗಿ ಕೆಲಸ ನಿರ್ವಹಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತ ಎಲ್ಲಾ ಅಂಶಗಳನ್ನು ಕೂಲಕಂಷವಾಗಿ ತನಿಖೆ ಮಾಡಿಸುತ್ತೇನೆ.

**ಸಭಾಪತಿಯವರುಃ–** ಶ್ರೀ ರಮೇಶ್ ರವರು ಇಲ್ಲ.

**ಪ್ರಶ್ನೆ ಸಂಖ್ಯೆ 740**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಮಹಿಳಾ ಮತ್ತು ಮಕ್ಕಳ ಇಲಾಖೆಯ ಸಿಬ್ಬಂದಿಗಳ ಬಗ್ಗೆ ಪ್ರಶ್ನೆ ಕೇಳಿದ್ದು, ಎ,ಬಿ,ಸಿ ವೃಂದದಲ್ಲಿ ಒಟ್ಟು 6,307ರಲ್ಲಿ ಸುಮಾರು 2,656 ಹುದ್ದೆಗಳು ಖಾಲಿ ಇರುವ ಬಗ್ಗೆ ತಿಳಿಸಿದ್ದು, 50% ಹುದ್ದೆಗಳು ಖಾಲಿ ಇವೆ. ಇಷ್ಟೊಂದು ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಇಲಾಖೆಯನ್ನು ಯಾವ ರೀತಿ ನಡೆಸುತ್ತಾರೆ? ಯಾವ ಯೋಜನೆಗಳನ್ನು ಸರಿಯಾಗಿ ತಲುಪಿಸಲು ಆಗುವುದಿಲ್ಲ. ನಿರುದ್ಯೋಗಿ ಸಮಸ್ಯೆ ಬಹಳ ಇದ್ದರೂ ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತಾರೆ ಎಂದು ನಿಖರವಾಗಿ ಹೇಳಬೇಕು. ಏಕೆಂದರೆ ಕೇವಲ 155 ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಇದೆ ಎಂದು ಹೇಳಿದ್ದಾರೆ. 50% ಕ್ಕಿಂತ ಹೆಚ್ಚು ಖಾಲಿ ಇದ್ದು, ಉಳಿದ ಹುದ್ದೆಗಳನ್ನು ಯಾವಾಗ ತುಂಬುತ್ತಾರೆ ಎಂದು ಹೇಳಬೇಕು.

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಖಾಲಿಯಿರುವ ಹುದ್ದೆಗಳನ್ನು ತುಂಬುವ ಬಗ್ಗೆ ಕೇಳಿದ್ದು, 6,307 ರಲ್ಲಿ 3,651 ಹುದ್ದೆಗಳು ಭರ್ತಿಯಾಗಿದ್ದು, 2,656 ಹುದ್ದೆಗಳು ಖಾಲಿ ಇವೆ. ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬೇಡಿಕೆ ಇಟ್ಟಿದ್ದು, ನೇರ ನೇಮಕಾತಿಗಾಗಿ ಖಾಲಿಯಿರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಾಗಿ 60, ಪ್ರಥಮ ದರ್ಜೆ ಸಹಾಯಕರ ಹುದ್ದೆಗಾಗಿ 50 ಮತ್ತು ಗೃಹ ಪಾಲಕರ 45 ಹುದ್ದೆಗಳನ್ನು ಭರ್ತಿ ಮಾಡಲು ಕೆಪಿಎಸ್‌ಸಿ ಗೆ ಪ್ರಸ್ತಾಪಿಸಿದೆ. ಉಳಿದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ಆದಷ್ಟು ಬೇಗ ತುಂಬಲು ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನಿನ್ನೆ ಫ್ರೀಡಂ ಪಾರ್ಕ್‌ನಲ್ಲಿ ಸುಮಾರು 6,000ಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತರು ಕನಿಷ್ಠ ವೇತನ ಕೊಡಬೇಕು ಮತ್ತು ವೇತನವನ್ನು ಹೆಚ್ಚು ಮಾಡಲು ಪ್ರತಿಭಟನೆ ನಡೆಸುತ್ತಿರುವ ವಿಷಯ ಎಲ್ಲಾ ಪತ್ರಿಕೆಗಳಲ್ಲಿಯೂ ಪ್ರಕಟವಾಗಿದೆ. ಅಂಗನವಾಡಿ ಕಾರ್ಯಕರ್ತರಿಗೆ ರೂ.10 ಕೊಡುತ್ತಿದ್ದು, ಇದನ್ನು ರೂ.21 ಸಾವಿರಕ್ಕೆ ಹೆಚ್ಚಿಸಬೇಕೆಂದು ಒತ್ತಾಯ ಮಾಡಿದ್ದಾರೆ. ಅದೇರೀತಿ ಅಂಗನವಾಡಿ ಸಹಾಯಕರಿಗೆ ರೂ.5,250 ಕೊಡುತ್ತಿದ್ದು, ಇದನ್ನು ರೂ.12 ಸಾವಿರಕ್ಕೆ ಹೆಚ್ಚಿಸಬೇಕೆಂದು ರಾಜ್ಯದಾದ್ಯಂತ ಪ್ರತಿಭಟನೆ ನಡೆದಿದೆ. ಅಂಗನವಾಡಿ ಕಾರ್ಯಕರ್ತರು ಕೊರೋನಾ ಸಮಯದಲ್ಲಿ ಸಾವು ನೋವು ಲೆಕ್ಕಿಸದೇ ಹೋರಾಟ

ಮಾಡಿಕೊಂಡು ಬಹಳಷ್ಟು ಕೆಲಸ ಮಾಡಿದ್ದಾರೆ. ಅವರು ಕನಿಷ್ಟ ವೇತನ ಹಾಗೂ ಪಿಂಚಣಿ ಸೌಲಭ್ಯ ಕಲ್ಪಿಸಬೇಕೆಂದು ಹೋರಾಟ ಮಾಡುತ್ತಿದ್ದು, ಇದರ ಬಗ್ಗೆ ಸರ್ಕಾರದ ಧೋರಣೆಯನ್ನು ಪ್ರಕಟ ಮಾಡಬೇಕು.

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಇದೊಂದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಜಂಟಿ ಕಾರ್ಯಕ್ರಮವಾಗಿದ್ದು, ಕೇಂದ್ರ ಸರ್ಕಾರವು ಕೇವಲ ರೂ.4,500 ಗಳನ್ನು ನೀಡಿದರೆ ರಾಜ್ಯ ಸರ್ಕಾರವು ರೂ.5,500 ಗಳನ್ನು ನೀಡಿ ಒಟ್ಟು ರೂ.10 ಸಾವಿರಗಳನ್ನು ನೀಡಲಾಗುತ್ತಿದೆ. ಈಗ ಹೆಚ್ಚಿನ ವೇತನಕ್ಕೆ ಬೇಡಿಕೆ ಇಟ್ಟಿದ್ದು, ಇದನ್ನು ಪರಿಶೀಲನೆ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಬಳಿ ಬೇಡಿಕೆ ಇಟ್ಟಿದ್ದೇನೆ. ಅವರು 5 ಬೇಡಿಕೆಗಳನ್ನು ಇಟ್ಟಿದ್ದು, ನಾನು ನಿನ್ನೆ ಅವರನ್ನು ಭೇಟಿ ಮಾಡಿದ್ದೇನೆ. ಅವರ ಎಲ್ಲಾ ಅಹವಾಲುಗಳನ್ನು ಕೇಳಿದ್ದೇನೆ, ಸರ್ಕಾರದ ವತಿಯಿಂದ ಏನೇನು ಅನುಕೂಲ ಮಾಡಿಕೊಡಲು ಸಾಧ್ಯವಿದೆಯೋ, ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದು ಹೇಳಬಯಸುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಅವರಿಗೆ ಎರಡು ವರ್ಷಗಳ ಹಿಂದೆ ಫಿಕ್ಸ್ ಮಾಡಿದ್ದು, ಇದನ್ನು ಹೆಚ್ಚಿಸುವ ಅವಶ್ಯಕತೆ ಇದ್ದು, ದಯವಿಟ್ಟು ಇದನ್ನು ಹೆಚ್ಚಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಈ ವಿಚಾರವನ್ನು ಸರ್ಕಾರದಲ್ಲಿ ಪರಿಶೀಲನೆ ಮಾಡುತ್ತೇನೆ.

**(ಮುಂದು)**

**(096)/22.02.2022/12.00/ಹೆಚ್‌ವಿ:ವಿಕೆ**

**<u>ತಡೆಹಿಡಿಯಲಾದ ಪ್ರಶ್ನೆ</u>**

**ಸಭಾಪತಿಯವರು:-** 3ನೇ ಪಟ್ಟಿಯಿಂದ ತಡೆಹಿಡಿಯಲಾದ ಶ್ರೀ ಸಿ.ಎನ್.ಮಂಜೇಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:42(244)ಕ್ಕೆ ಉತ್ತರವನ್ನು ನೀಡಲು ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಸದನದಲ್ಲಿ ಈಗ ಹಾಜರಿಲ್ಲದೇ ಇರುವುದರಿಂದ ಈ ಪ್ರಶ್ನೆಯನ್ನು ಪುನಃ ತಡೆಹಿಡಿಯಲಾಗುತ್ತಿದೆ.

**(ಗೊಂದಲ)**

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ:22ನೇ ಫೆಬ್ರವರಿ 2022ರ ಸಮೂಹ-02ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 97 ಪ್ರಶ್ನೆಗಳ ಪೈಕಿ 45 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಗೊಂದಲ)**

**೦3. ಸಭಾಪತಿಯವರ ಅನುಮತಿಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ**

**(ಅ) ರಾಜ್ಯ ಅಂಗನವಾಡಿ ಕಾರ್ಯಕರ್ತೆಯವರು ಕನಿಷ್ಠ ವೇತನ ಕೋರಿ ಧರಣಿ ಪ್ರಾರಂಭಿಸಿರುವ ಬಗ್ಗೆ**

---

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಅಂಗನವಾಡಿ ಕಾರ್ಯಕರ್ತೆಯವರು ಮತ್ತು ಸಹಾಯಕಿಯರ ಸಂಘದ ನೇತೃತ್ವದಲ್ಲಿ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ ಉದ್ಯಾನದವರೆಗೆ ಬೆಂಗಳೂರು ಚಲೋ ಮೆರವಣಿಗೆಯಲ್ಲಿ ಭಾಗವಹಿಸಿ ಬಹಿರಂಗ ಸಭೆ ನಡೆಸಿ ಸ್ವಾತಂತ್ರ ಉದ್ಯಾನದಲ್ಲಿ ಅನಿರ್ಧಿಷ್ಟಾವಧಿ ಧರಣಿಯನ್ನು ಪ್ರಾರಂಭಿಸಿದ್ದಾರೆ. ರಾಜ್ಯದ ಅಂಗನವಾಡಿಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಕಾರ್ಯಕರ್ತೆಯವರು ಹಾಗೂ ಸಹಾಯಕಿಯರು ಕೆಲಸ ಮಾಡುತ್ತಿದ್ದು, ಸರ್ಕಾರದ ಅನೇಕ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ರಾಜ್ಯ ಸರ್ಕಾರ ಇವರಿಗೆ ಕೆಲಸಕ್ಕೆ ತಕ್ಕ ವೇತನವನ್ನು ನೀಡುತ್ತಿಲ್ಲ. ಸೇವಾ ಹಿರಿತನದ ಆಧಾರದಲ್ಲಿ ವೇತನ ನೀಡುತ್ತಿಲ್ಲ. ನಿವೃತ್ತಿ ಪಿಂಚಣಿ ಸಹ ನೀಡುತ್ತಿಲ್ಲ. ರಾಜ್ಯ ಸರ್ಕಾರದ ನಿಯಮಾವಳಿ ಪ್ರಕಾರ ಅಂಗನವಾಡಿ ಕಾರ್ಯಕರ್ತೆಯವರಿಗೆ 18,000 ಕನಿಷ್ಠ ವೇತನ ಕೊಡಬೇಕು. ಆದರೆ, ಕೇವಲ 10,000 ರೂಪಾಯಿಗಳಿಗೆ ದುಡಿಸಿಕೊಳ್ಳಲಾಗುತ್ತಿದೆ. ಆದ್ದರಿಂದ ಇವರುಗಳು ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದ್ದರು, ಸರ್ಕಾರ ಸ್ಪಂಧಿಸಿರುವುದಿಲ್ಲ. ಆದ್ದರಿಂದ ಇವರುಗಳು ತಮ್ಮ ವೇತನ ಹೆಚ್ಚಳ ಮತ್ತು ನಿವೃತ್ತಿ ಪಿಂಚಣಿ ಕೊಡಬೇಕೆಂಬ ಬೇಡಿಕೆಯು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆಯನ್ನು ನಡೆಸುತ್ತಿದ್ದಾರೆ.

ಆದ್ದರಿಂದ ಸರ್ಕಾರ ಈ ಬಗ್ಗೆ ಗಮನಹರಿಸಿ ಇವರ ಬೇಡಿಕೆಗಳನ್ನು ಈಡೇರಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**(ಗೊಂದಲ)**

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಬಹಳ ಜನರು ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ಧಿಷ್ಟಾವಧಿ ಧರಣಿಯನ್ನು ಪ್ರಾರಂಭಿಸಿದ್ದಾರೆ. ಈ ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅವರ ಬೇಡಿಕೆಗಳನ್ನು

ಪರಿಶೀಲಿಸಿ, ಮುಂದಿನ ಆಯವ್ಯಯದಲ್ಲಿ ಅನುಕೂಲತೆಗಳನ್ನು ಕಲ್ಪಿಸಿಕೊಡುವಂತಹ ಪ್ರಯತ್ನವನ್ನು ಮಾಡಲಾಗುತ್ತದೆ.

**(ಗೊಂದಲ)**

**೦4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರ ಹೇಳಿಕೆ**

**ವಿಷಯ: ಕೋಲಾರ ನಗರದಲ್ಲಿರುವ ಎಸ್.ಎನ್.ಆರ್. ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಮೇಲೆ ಸೇವೆ ಸಲ್ಲಿಸುತ್ತಿರುವ ಸುಮಾರು 134 ನೌಕರರ ವೇತನ ಪಾವತಿಯಾಗದಿರುವ ಬಗ್ಗೆ**

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಶ್ರೀ ಗೋವಿಂದರಾಜುರವರು ದಿನಾಂಕ:15.02.2022ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಸರ್ಕಾರದಿಂದ ಉತ್ತರವನ್ನು ಸದನ ಮುಂದೆ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

**೦೫. <u>ಕಾರ್ಯದರ್ಶಿಯವರ ವರದಿ</u>**

**ಕಾರ್ಯದರ್ಶಿ(ಕ.ವಿ.ಪ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ:

೦1. ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕ, 2022

೦2. ಕರ್ನಾಟಕ ಸ್ಟಾಂಪು (ತಿದ್ದುಪಡಿ)ವಿಧೇಯಕ, 2022

೦3. ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2022

೦4. ಕ್ರಿಮಿನಲ್ ಕಾನೂನು ತಿದ್ದುಪಡಿ ಅಧ್ಯಾದೇಶ, 1944(ಕರ್ನಾಟಕ ತಿದ್ದುಪಡಿ) ವಿಧೇಯಕ, 2022

**೦6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕ, 2022**

**ಪ್ರರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**(ಗೊಂದಲ)**

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, 2011ನೇ ಸಾಲಿನಲ್ಲಿ ಕೆ.ಪಿ.ಎಸ್.ಸಿ. ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಗಾಗಿ ನೋಟಿಫಿಕೇಶನ್ ಹೊರಡಿಸಿ, ಆಯ್ಕೆ ಪ್ರಕ್ರಿಯೆಯನ್ನು ನಡೆಸಿರುತ್ತದೆ. ಅದರಲ್ಲಿ ಸುಮಾರು 362 ಜನ ಆಯ್ಕೆಗೊಂಡಿರುತ್ತಾರೆ. ಈ ಆಯ್ಕೆಯಲ್ಲಿ ದೋಷವಿದೆ. ಅದನ್ನು ಅಸಿಂಧುಗೊಳಿಸಬೇಕೆಂದು ಅಭ್ಯರ್ಥಿಯೊಬ್ಬರು ಕೊಟ್ಟ ಅರ್ಜಿಯ ಆಧಾರದ ಮೇಲೆ ಆಯ್ಕೆಯನ್ನು ಪ್ರಶ್ನೆ ಮಾಡಿ, ಆ ಆಯ್ಕೆಯನ್ನು ಅಸಿಂಧುಗೊಳಿಸಬೇಕೆಂದು ಹಿಂದಿನ ಸರ್ಕಾರ ತೀರ್ಮಾನ ತೆಗೆದುಕೊಂಡಿತ್ತು. ಕೆ.ಎ.ಟಿ.ಯಲ್ಲಿ ಸ್ಟೇ ಆದ ನಂತರ, ಹಿಂದಿನ ಸರ್ಕಾರ ಪುನಃ ನೋಟಿಫೈ ಮಾಡುತ್ತೇವೆಂದು ಹೇಳಿತ್ತು. ಲೋಕಸೇವಾ ಆಯೋಗದವರು ಆ ಆಯ್ಕೆಯನ್ನು ಅಸಿಂಧುಗೊಳಿಸುವುದಕ್ಕೆ ಯಾವುದೇ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಭಾರತ ಸಂವಿಧಾನದ ಅನುಚ್ಛೇದ 323/2ರಡಿಯಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿಗೆ ಮಾತ್ರ ಅಧಿಕಾರವಿರುತ್ತದೆ. ಈ ಅನುಚ್ಛೇದದಲ್ಲಿರುವಂತಹ ಅಂಶಗಳನ್ನು

ಉಲ್ಲಂಘನೆ ಮಾಡಿ, "ನಾವು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಗಮನಕ್ಕೆ ತೆಗೆದುಕೊಂಡು ಹೋಗಿದ್ದೇವೆ" ಎಂದು ರಾಜ್ಯದ ಹೈಕೋರ್ಟ್‌ನಲ್ಲಿ ವಾದ ಮಂಡಿಸಿ, ಹೈಕೋರ್ಟ್ ಅನ್ನು ತಪ್ಪು ದಾರಿಗೆಳೆದು, 2011ರ ಆಯ್ಕೆ ಪಟ್ಟಿಯನ್ನು ಸಿಂಧು ಮಾಡಲಾಗಿತ್ತು. ಈ ವಿಚಾರದ ಬಗ್ಗೆ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗಿ ಈ ರೀತಿ ಮಾಡಿರುವುದು ತಪ್ಪು ಎಂದು ಅರ್ಥವಾಯಿತು. ನಾನು ಎರಡೂ ಮನೆಗಳ ಸದಸ್ಯರಿಗೆ ಮಾತು ಕೊಟ್ಟಿದ್ದೆ. ಎಲ್ಲ ಪಕ್ಷದ ಸದಸ್ಯರುಗಳು "ಸರ್ಕಾರ ಮತ್ತೊಮ್ಮೆ ನೋಟಿಫಿಕೇಶನ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು" ಎಂದು ಎರಡು ಮೂರು ಬಾರಿ ಒತ್ತಾಯಿಸಿದ ಹಿನ್ನೆಲೆಯಲ್ಲಿ ಸರ್ಕಾರ ಈ ದಿನ ಈ ವಿಧೇಯಕವನ್ನು ತಂದಿದೆ. 2014ನೇ ಸಾಲಿನಲ್ಲಿ ಕೆ.ಪಿ.ಎಸ್.ಸಿ.ಯಿಂದ ಆಯ್ಕೆ ಮಾಡಲಾಗಿದ್ದ 362 ಜನ ಅಭ್ಯರ್ಥಿಗಳ ಪಟ್ಟಿಯು ಸಿಂಧು ಆಗುತ್ತದೆ. ಅದರ ನಂತರ ಅವರಿಗೆ ಪೋಸ್ಟಿಂಗ್ ಕೊಡುವುದರ ಬಗ್ಗೆ ನಾವು ನಿಯಮಗಳನ್ನು ರೂಪಿಸಿ ಪೋಸ್ಟಿಂಗ್ ನೀಡಲಾಗುತ್ತದೆ.

ಸರ್ಕಾರ ತಂದಿರುವಂತಹ ಈ ವಿಧೇಯಕವನ್ನು ಸದನ ಅಂಗೀಕರಿಸಬೇಕೆಂದು ಕೋರುತ್ತಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕ, 2022ನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ. ಈ ಸದನದಲ್ಲಿ ನಾಲ್ಕಾರು ಬಾರಿ ಪಕ್ಷಾತೀತವಾಗಿ ಈ ಕುರಿತು ಚರ್ಚೆಯನ್ನು ಮಾಡಿದ್ದೆವು. ಈ ಹಿಂದೆ ಸುಮಾರು 13 ಜನರು ಮುನಿಸಿಪಲ್ ಅಧಿಕಾರಿಗಳಾಗಿ, ತಾಲ್ಲೂಕು ಪಂಚಾಯಿತಿ ಇ.ಓ.ಗಳಾಗಿ 21ಜನರು ಒಂದು ವರ್ಷಕ್ಕೂ ಹೆಚ್ಚು ಕಾಲ ಕಾರ್ಯ ನಿರ್ವಹಿಸಿದ್ದರು.

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ, ಸರ್ಕಾರ ತಂದಿರುವಂತಹ ವಿಧೇಯಕದಲ್ಲಿ ತಾವು ಹೇಳುತ್ತಿರುವ ಎಲ್ಲ ವಿವರಣೆಗಳು ಇವೆ. ತಮ್ಮ ಅಭಿಪ್ರಾಯವನ್ನು ಹೇಳಿ ಸಾಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ನೊಂದ 362 ಜನ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸಿಕೊಡುತ್ತಿದೆ. ಅವರೆಲ್ಲರ ಪರವಾಗಿ ಮತ್ತು ಎಲ್ಲ ಮಾನ್ಯ

ಸದಸ್ಯರುಗಳ ಪರವಾಗಿ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ ಮತ್ತು ಈ ವಿಧೇಯಕವನ್ನು ಸ್ವಾಗತಿಸುತ್ತಿದ್ದೇನೆ.

**(ಗೊಂದಲ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ನಾನು ಸಹ ಈ ವಿಧೇಯಕವನ್ನು ಸ್ವಾಗತಿಸುತ್ತಿದ್ದೇನೆ. ಆದರೆ, ರಾಜ್ಯ ಸರ್ಕಾರ ಇದರ ಬಗ್ಗೆ ಹೆಚ್ಚು ನಿಗಾ ವಹಿಸಬೇಕಾಗುತ್ತದೆ. ಏಕೆಂದರೆ, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಹೈಕೋರ್ಟ್ ಮತ್ತು ಕಾನೂನು ಇಲಾಖೆಯವರು ಕೊಟ್ಟಿರುವಂತಹ ಅಭಿಪ್ರಾಯಕ್ಕೆ ವಿರುದ್ಧವಾಗಿ ಸರ್ಕಾರ ಈ ವಿಧೇಯಕವನ್ನು ತಂದಿದೆ. ಈ ವಿಧೇಯಕವನ್ನು ನಾವು ಅಂಗೀಕರಿಸಿ ಕಳುಹಿಸಿಕೊಟ್ಟರೂ ಸಹ ಸಾಕಷ್ಟು ಕಾನೂನು ಹೋರಾಟಗಳು ನಡೆಯುವಂತಹ ಸಾಧ್ಯತೆಗಳಿವೆ ಅದಕ್ಕೆ ಸರ್ಕಾರ ಸಿದ್ಧವಾಗಿರಬೇಕಾಗುತ್ತದೆ. ಯಾವುದೇ ರೀತಿಯಲ್ಲಿಯೂ ಈ ಅಭ್ಯರ್ಥಿಗಳಿಗೆ ಅನ್ಯಾಯವಾಗಬಾರದೆಂದು ಹೇಳುತ್ತಾ, ಸರ್ಕಾರ ತಂದಿರುವಂತಹ ಈ ವಿಧೇಯಕಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವಂತಹ ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕವನ್ನು ಎಲ್ಲ ಪದವೀಧರರ ಪರವಾಗಿ ನಾನು ಸ್ವಾಗತಿಸುತ್ತಿದ್ದೇನೆ.

**ಶ್ರೀ ಎಸ್.ರುದ್ರೇಗೌಡ(ವಿಧಾಸಭೆಯಿಂದ ಚುನಾಯಿತರಾದವರು):-**ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವಂತಹ ಈ ವಿಧೇಯಕವನ್ನು ಸ್ವಾಗತಿಸುತ್ತಾ, ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. 362 ಜನರಿಗೆ ಸರ್ಕಾರ ಜೀವನವನ್ನು ನೀಡಿದೆ. ಅದಕ್ಕಾಗಿ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಯ ವಿಚಾರದಲ್ಲಿ ಸರ್ಕಾರ ಬಹಳ ದಿಟ್ಟ ನಿಲುವನ್ನು ತೆಗೆದುಕೊಂಡಿದೆ ಇದನ್ನು ಪಕ್ಷಾತೀತವಾಗಿ ಎಲ್ಲ

ಸದಸ್ಯರು ಬೆಂಬಲಿಸಿದ್ದಾರೆ. ಬಹಳ ದುಃಖದಲ್ಲಿರುವಂತಹ ಈ ನಾಡಿನ 362 ಜನ ಅಭ್ಯರ್ಥಿಗಳ ಕಣ್ಣೀರು ಒರೆಸುವಂತಹ ಮಾನವೀಯ ಕೆಲಸವನ್ನು ಅದಕ್ಕಾಗಿ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

(ಗೊಂದಲ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕ, 2022ನ್ನು ಸರ್ಕಾರ ಈ ಸಭೆಯ ಮುಂದೆ ಮಂಡಿಸಿದೆ. ಅದನ್ನು ನಾನು ಸ್ವಾಗತಿಸುತ್ತಿದ್ದೇನೆ. ಸುಮಾರು 362 ಜನರು ಈ ಬಗ್ಗೆ ಕಳೆದ 10 ವರ್ಷಗಳಿಂದ ಸಾಕಷ್ಟು ಹೋರಾಟಗಳನ್ನು ನಡೆಸಿ ಈ ಆದೇಶವನ್ನು ಪಡೆದುಕೊಂಡಿದ್ದಾರೆ. ಈ ವಿಧೇಯಕದ ಮೂಲಕ ಅವರಿಗೆ ಮರು ನೇಮಕಾತಿ ಆದೇಶವನ್ನು ಕೊಡುವಂತಹ ಸರ್ಕಾರದ ಈ ನಿಲುವನ್ನು ನಾನು ಸ್ವಾಗತಿಸುತ್ತಿದ್ದೇನೆ. 362 ಕುಟುಂಬಗಳಿಗೆ ನ್ಯಾಯವನ್ನು ಒದಗಿಸಿಕೊಟ್ಟಂಥ ಕೀರ್ತಿ ಈ ಸರ್ಕಾರಕ್ಕೆ ಸಲ್ಲುತ್ತಿದೆ. ಈ ಹಿನ್ನೆಲೆಯಲ್ಲಿ ನಾನು ಈ ವಿಧೇಯಕವನ್ನು ಸ್ವಾಗತಿಸುತ್ತಿದ್ದೇನೆ.

(ಗೊಂದಲ)

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಗೊಂದಲ)

**ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 4**

**ಸಭಾಪತಿಯವರು:-** "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ನಾನು ಎಲ್ಲ ಮಾನ್ಯ ಸದಸ್ಯರುಗಳಿಗೆ ವಂದನೆಗಳನ್ನು ಅರ್ಪಿಸುತ್ತಿದ್ದೇನೆ. ಮಾನ್ಯ ತಿಪ್ಪೇಸ್ವಾಮಿಯವರು ಹೇಳಿದಂತೆ ಮುಂದೆ ಎದುರಾಗುವಂತಹ ಕಾನೂನು ಸಮರವನ್ನು ಎದುರಿಸುವುದಕ್ಕೆ ಸರ್ಕಾರ ಸಿದ್ಧವಿದೆ. ಬೇಸ್ ಟೈಂ ಅನ್ನು ಯಾವ ರೀತಿಯಲ್ಲಿ ತೆಗೆಯಬಹುದು ಎನ್ನುವುದನ್ನು ನಾವು ಪೀಠಿಕೆಯಲ್ಲಿ ಹೇಳಿದ್ದೇವೆ, ಕೊನೆಯವರೆವಿಗೂ ಆ ಮಕ್ಕಳನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ. ನಮ್ಮ ಕೈಯಲಾದ ಎಲ್ಲ ಪ್ರಯತ್ನಗಳನ್ನು ನಾವು ಮಾಡುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, 2022ರ ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;
"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಮುಂದು)**

**(97) 22.2.2022 12.10 ಪಿಕೆ:ವಿಕೆ**

**ಆ) ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2022**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಸ್ಟಾಂಪು (ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಅಡಿಯಲ್ಲಿ ನೊಂದಾಯಿಸಿದ ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘದಿಂದ ಹಂಚಿಕೆಯಾದಂತಹ, ಗುತ್ತಿಗೆ ಕರಾರಿನ ಮೇಲೆ ನೊಂದಾಯಿಸತಕ್ಕಂಥ, ಗುತ್ತಿಗೆ ಅವಧಿ ಪೂರ್ಣಗೊಂಡು ನಂತರ ಶುದ್ಧ ಕ್ರಯಪತ್ರ ಮಾಡುವಾಗ, ಮೂಲ ಮಾರ್ಗಸೂಚಿ ಏನಿದೆ ಅದಕ್ಕಿಂತ, ಅವರು ಕೊನೆಯದಾಗಿ ಮಾಡಿಕೊಳ್ಳುವಂಥದ್ದಕ್ಕೆ ಸ್ಟಾಂಪು

ಶುಲ್ಕ ಜಾಸ್ತಿ ಆಗುತ್ತಿದೆ. ಇದರಿಂದ ಯಾರು ಸಹಕಾರ ಸಂಘಗಳ ಮೂಲಕ ನಿವೇಶನಗಳನ್ನು ಖರೀದಿ ಮಾಡುತ್ತಿದ್ದಾರೋ ಅವರಿಗೆ ಹೊರೆ ಆಗುತ್ತಿದೆ. ಆ ಹೊರೆಯನ್ನು ತಪ್ಪಿಸಬೇಕಿದೆ. 2001ರಲ್ಲೂ ನಾವು ಇದೇ ರೀತಿಯ ಅವಕಾಶ ಕಲ್ಪಿಸಿದ್ದೆವು. ಮತ್ತೆ ಆ ಅವಕಾಶವನ್ನು ಕಲ್ಪಿಸುತ್ತಿದ್ದೇವೆ.

ಅದೇರೀತಿ ಕರ್ನಾಟಕ ಮುದ್ರಾಂಕ ಕಾಯಿದೆಯಲ್ಲಿ ಏನು "ಸ್ಟಾಂಪು" ಎಂದಿತ್ತೋ ಅದನ್ನು ನಾವು "ಇ-ಸ್ಟಾಂಪ್" ಎಂದು ಮಾಡುತ್ತಿದ್ದೇವೆ. "ಇ-ಸ್ಟಾಂಪ್"ನ್ನು ಕಾನೂನಿನ ಅಡಿಯಲ್ಲಿ ತರುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಜವಳಿ ಉದ್ಯಮಕ್ಕೆ ಪ್ರೋತ್ಸಾಹ ಕೊಡಬೇಕು, ಅಲ್ಲಿ ಉದ್ಯೋಗ ಸೃಷ್ಟಿ ಆಗಬೇಕು ಎನ್ನುವ ದೃಷ್ಟಿಯಿಂದ, ಭೋಗ್ಯ, ಮಾರಾಟ ಹಾಗೂ ಕ್ರಯ ಪತ್ರ ಕೊಡುವಿಕೆಯಲ್ಲಿ, ಅಡಮಾನ ಇಡುವಂಥದ್ದು ಇದ್ದಾಗ ಅವರಿಗೆ ಸಾಲ ಪತ್ರ ನೀಡುವಂಥದ್ದಕ್ಕೆ ವಿನಾಯಿತಿಯನ್ನು ಕೊಡುತ್ತಿದ್ದೇವೆ.

ಒಟ್ಟಿನಲ್ಲಿ ಈ ವಿಧೇಯಕ ಜನರಿಗೆ ಸಹಾಯವಾಗಲಿ ಎನ್ನುವ ದೃಷ್ಟಿಯಿಂದ ಮಾಡಿದ್ದು ಇದನ್ನು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಸ್ಟಾಂಪು (ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 4 ರವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 4 ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 4 ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು)**:- ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಸ್ಟಾಂಪು(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಸ್ಟಾಂಪು(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಇ) ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2022**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಕಂಪನಿಗಳು ಹೊಂದಿರುವ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯದಲ್ಲಿ ನಾವು ಶೇಕಡ 3 ರಷ್ಟು ಮುದ್ರಾಂಕ ಶುಲ್ಕವನ್ನು ವಿಧಿಸುತ್ತಿದ್ದೆವು. ಆ ಶೇರುಗಳ ಮೌಲ್ಯ ಹೆಚ್ಚಾದಾಗ, ವರ್ಗಾವಣೆ ಮಾಡುವಂತಹ ಕಂಪನಿಗಳಿಗೆ ಅಸಂಬದ್ಧ ಮುದ್ರಾಂಕ ಶುಲ್ಕ ಪಾವತಿಸಬೇಕಾಗಿದೆ. ಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ ಸ್ಟಾಂಪ್ ಶುಲ್ಕವನ್ನು ರೂ. 25 ಕೋಟಿ ಮಾತ್ರ ನಿಗದಿ ಮಾಡಿರುವುದರಿಂದ, ನಮ್ಮ ರಾಜ್ಯದಲ್ಲಿರುವ ಕಂಪನಿಗಳು ಬೇರೆ ರಾಜ್ಯಗಳಿಗೆ ಹೋಗುವ ಅವಕಾಶ ಆಗುತ್ತಿದೆ. ಹಾಗಾಗಿ ನಮ್ಮಲ್ಲೂ ಕೂಡ ಗರಿಷ್ಠ ಮಿತಿಯನ್ನು ರೂ.25 ಕೋಟಿಗೆ ಲಿಮಿಟ್ ಮಾಡಿದರೆ ನಮ್ಮ ರಾಜ್ಯದಲ್ಲಿ ಬಂಡವಾಳ ಹೆಚ್ಚು ಹರಿದು ಬರುತ್ತದೆ; ಇದರಿಂದ ಉದ್ಯೋಗ ಸೃಷ್ಟಿಗೆ ಅವಕಾಶವಾಗುತ್ತದೆ. ಆದ್ದರಿಂದ ಈ ಹಿಂದೆ ಏನು ಮೊತ್ತದ ಲಿಮಿಟ್ ಇತ್ತೋ ಆ ಮೊತ್ತವನ್ನು ಕಡಿಮೆ ಮಾಡುತ್ತಿದ್ದೇವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

“ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಸ್ಟಾಂಪು(ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(098) 22-2-2022 12.20 ಡಿಎಸ್-ಬಿಎಸ್‌ಎಸ್

**ಈ) ಕ್ರಿಮಿನಲ್ ಕಾನೂನು ತಿದ್ದುಪಡಿ ಅಧ್ಯಾದೇಶ, 1944 (ಕರ್ನಾಟಕ ತಿದ್ದುಪಡಿ) ವಿಧೇಯಕ, 2022**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)(ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ನೇ ಸಾಲಿನ **"ಕ್ರಿಮಿನಲ್ ಕಾನೂನು ತಿದ್ದುಪಡಿ ಅಧ್ಯಾದೇಶ, 1944 (ಕರ್ನಾಟಕ ತಿದ್ದುಪಡಿ) ವಿಧೇಯಕ"** ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ economic offenders, money laundering case ನಲ್ಲಿ 'District Judge' ಎನ್ನುವ ಒಂದು ಪದ ಮಾತ್ರ ಇತ್ತು. ನಮ್ಮ ವ್ಯಾಪ್ತಿ District Judge ಗೆ trial ಮಾಡುವುದಕ್ಕೆ ಮತ್ತೊಂದಕ್ಕೆ, ಮೊಗದೊಂದಕ್ಕೆ ಲಿಮಿಟ್ ಆಗಿ ಇತ್ತು. ಆ 'District Judge' ಜೊತೆಗೆ 'Principal District Judge' ಎನ್ನುವ ಒಂದು ಪದವನ್ನು ಸೇರಿಸುತ್ತಿದ್ದೇವೆ. ಜೊತೆಗೆ jurisdictional Judges ಗೂ ಕೂಡ ಅಧಿಕಾರ ಕೊಡುತ್ತಿದ್ದೇವೆ. ಅಲ್ಲಿ ಯಾರು ಆ ವ್ಯಾಪ್ತಿಯಲ್ಲಿ designated Judges ಇರುತ್ತಾರೆ ಅವರು ಕೂಡ trial ಮಾಡಬಹುದು, ಕ್ರಮ ತೆಗೆದುಕೊಳ್ಳಬಹುದು ಎಂದು ಅವರಿಗೆ ವ್ಯಾಪ್ತಿ ವಿಸ್ತಾರ ಮಾಡುವುದಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ. ಎರಡನೆಯದು, in respect of attachment, economic offenders ವಿಚಾರದಲ್ಲಿ ಕೇವಲ ನಮ್ಮ ಅಥಾರಿಟಿಗೆ ಮಾತ್ರ ಅಧಿಕಾರ ಇತ್ತು. ಈಗ ಅದನ್ನು ನಾವು ನಮ್ಮ ವ್ಯಾಪ್ತಿಗೆ ತೆಗೆದುಕೊಂಡು ಕ್ರಿಮಿನಲ್ ಕಾನೂನು ತೆಗೆದುಕೊಂಡು attachment ಮಾಡುವ ಅಧಿಕಾರ ಕೂಡ ಬಳಸಿಕೊಳ್ಳುತ್ತಿದ್ದೇವೆ. Attachment ಆದಮೇಲೆ recovery proceedings ಮಾಡುವುದಕ್ಕೆ distribute ಮಾಡುವುದಕ್ಕೆ ನಮಗೆ ಸಹಾಯವಾಗುತ್ತದೆ. ಇದು ಬರೀ ಅಥಾರಿಟಿಗೆ ಮತ್ತೆ ಯಾರಿಗೋ ಹೋಗಿ ಕೋರ್ಟ್‌ಗಳ ವ್ಯಾಪ್ತಿ, ಸರ್ಕಾರದ ವ್ಯಾಪ್ತಿಯಿಂದ ಆಚೆ ಇದ್ದುದರಿಂದ ಈ

ತಿದ್ದುಪಡಿಯನ್ನು ತಂದು economic offenders ಅನ್ನು ಕಡಿಮೆ ಮಾಡಬೇಕು, ಅವರನ್ನು punish ಮಾಡಬೇಕು ಎನ್ನುವುದಕ್ಕೆ ಈ ವಿಧೇಯಕವನ್ನು ತಂದಿದ್ದೇವೆ. ಈ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. Enforcement Directorate ಗೆ ಏನು ಪವರ್ ಇತ್ತು ಆ Enforcement Directorate power ಅನ್ನು ನಾವು ಇವತ್ತು ಕೆಳಗೆ ಇಳಿಸಿಕೊಂಡು ಬಂದು ಹಂತ ಹಂತವಾಗಿ ಅದಕ್ಕೆ ಅಧಿಕಾರಗಳನ್ನು ಕೊಡುತ್ತಿದ್ದೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಾನು 2-3 ಸ್ಪಷ್ಟೀಕರಣವನ್ನು ಮಾನ್ಯ ಸಚಿವರಿಗೆ ಕೇಳಬಯಸುತ್ತಿದ್ದೇನೆ. ಅಧ್ಯಾದೇಶ, 1944 ಇದೆ ಅದು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ತಂದಿರುವ ಅಧ್ಯಾದೇಶವೇ? ಈ ಅಧ್ಯಾದೇಶ ಇದುವರೆಗೆ ಕಾಯ್ದೆಯಾಗಿ ಪರಿವರ್ತನೆ ಆಗಿಲ್ಲವೇ? ಎರಡನೆಯದಾಗಿ, ಅಧಿಸೂಚನೆಯ ಪ್ಯಾರಾ 4 ರಲ್ಲಿ "ಯುನೈಟೆಡ್ ಕಿಂಗ್‌ಡಮ್‌ನ ಘನತೆವೆತ್ತ ಸರ್ಕಾರ ಅಥವಾ ಘನತೆವೆತ್ತ ಅಧಿಪತ್ಯ" ಎಂದು ಹೇಳಿದ್ದಾರೆ. ಏನಾದರು Common Wealth countries ನಲ್ಲಿ ಇರತಕ್ಕಂಥಗೋಸ್ಕರವಾಗಿ ಇದನ್ನು ನಾವು ಉಳಿಸಿಕೊಂಡಿದ್ದೇವೆಯೇ? ಇದನ್ನು ನಾವು ಏಕೆ ಇದುವರೆಗೂ ತೆಗೆದುಹಾಕಿಲ್ಲ? ನಾವು 'Her Majesty', 'His Majesty' ಯಲ್ಲಿ ಇದ್ದೇವೆಯಲ್ಲವೇ? ಇದಕ್ಕೇನಾದರೂ ಕೇಂದ್ರ ಸರ್ಕಾರಕ್ಕೆ ತಿದ್ದುಪಡಿ ಮಾಡುವುದಕ್ಕೆ ಕಳುಹಿಸಿದ್ದಾರೆಯೇ? ಎರಡನೆಯದಾಗಿ, Enforcement Directorate ಎಷ್ಟು ಕೇಸ್‌ಗಳನ್ನು ತೆಗೆದುಕೊಂಡಿದ್ದಾರೆ, ಇನ್ನು ಎಷ್ಟು ಕೇಸ್‌ಗಳನ್ನು ರಾಜ್ಯ ಸರ್ಕಾರದ ಮಟ್ಟದಲ್ಲಿ ಅದನ್ನು ನಿರ್ವಹಣೆ ಮಾಡುತ್ತಿದ್ದಾರೆ ಎಂಬ ಮಾಹಿತಿಯನ್ನು ಕೊಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, Enforcement Directorate ಮುಂದೆ ಎಷ್ಟು ಕೇಸ್ ಇವೆ ಎನ್ನುವ ಮಾಹಿತಿ ಸದ್ಯಕ್ಕೆ ನನ್ನ ಹತ್ತಿರ ಇಲ್ಲ. ಮಾನ್ಯ ಸದಸ್ಯರಿಗೆ ಬೇಕೆಂದರೆ ಗೃಹ ಇಲಾಖೆಯವರು ಆಮೇಲೆ ಕಳುಹಿಸುತ್ತಾರೆ. 'Her Majesty', 'His Majesty' ಎಂದು ಏನು Government Orders ಆಗುತ್ತಿತ್ತು ಅದು ಮಾಮೂಲಿಯಾಗಿ ಬಂದುಬಿಟ್ಟಿದೆ. ಅದೇನು ಪ್ರಸ್ತುತ ಅಲ್ಲ. ನಾವು ಈಗ attachment, recovery, Enforcement Directorate and Authorities ಮಾಡುತ್ತಿರುವುದನ್ನು ನಮ್ಮ ರಾಜ್ಯದಿಂದ ನ್ಯಾಯಾಲಯಗಳಿಂದ ಮಾಡಿಸಬಹುದು, particularly, attachment ಮಾಡುವುದಕ್ಕೆ ನಮಗೆ ಅಧಿಕಾರ ಇರಲಿಲ್ಲ. Trial ಮಾಡಿದರು attachment ಮಾಡುವುದಕ್ಕೆ ಆಗುತ್ತಿರಲಿಲ್ಲ. ಆ

ಅಧಿಕಾರ ಕೊಡಬೇಕು. Original law ನಲ್ಲಿ 'ಜಿಲ್ಲಾ ನ್ಯಾಯಾಧೀಶರು' ಎಂದು ಇತ್ತು. ಆನಂತರ designation ಅನ್ನು ಬದಲಾವಣೆ ಮಾಡಿದ್ದೇವೆ. 'Principal District Judge' ಎಂದು ಮಾಡಿದ್ದೇವೆ. ಕೆಲವು ಕಡೆ additional Sessions Court ಗಳಾಗಿವೆ. ಆ ನ್ಯಾಯಾಧೀಶರುಗಳಿಗೆ ಮತ್ತು designated Judge ಅನ್ನು ನಾವು ಈ ಉದ್ದೇಶಕ್ಕೆ ಮಾಡಿದರೆ ಅವರು ಕೂಡ ಇದರ ವ್ಯಾಪ್ತಿಗೆ ಬರಲಿ, jurisdiction ಇರಲಿ ಎನ್ನುವ ಉದ್ದೇಶಕ್ಕೆ ಈ ವಿಧೇಯಕವನ್ನು ತಂದಿದ್ದೇವೆ. By this, ಆ offences ಅನ್ನು ಕಡಿಮೆ ಮಾಡುವುದಕ್ಕೆ, offenders ಅನ್ನು ನಾವು ಹತೋಟಿಗೆ ತರುವುದಕ್ಕೆ ಕಾನೂನಿನಲ್ಲಿ ನಮಗೆ ಶಕ್ತಿ ಬರುತ್ತದೆ. No doubt ಇದು Central Act ಇತ್ತು, but we are empowered to enact the law. So, we are bringing amendment to the law.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ರ ಕ್ರಿಮಿನಲ್ ಕಾನೂನು ತಿದ್ದುಪಡಿ ಅಧ್ಯಾದೇಶ, 1944 (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 5 ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ನೇ ಸಾಲಿನ "**ಕ್ರಿಮಿನಲ್ ಕಾನೂನು ತಿದ್ದುಪಡಿ ಅಧ್ಯಾದೇಶ, 1944 (ಕರ್ನಾಟಕ ತಿದ್ದುಪಡಿ) ವಿಧೇಯಕ**" ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ರ ಕ್ರಿಮಿನಲ್ ಕಾನೂನು ತಿದ್ದುಪಡಿ ಅಧ್ಯಾದೇಶ, 1944 (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**೦7. ಪ್ರಕಟಣೆ**

**ಸಭಾಪತಿಯವರು:- ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:22.02.2022 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2022.

2. ಕರ್ನಾಟಕ ವಿಧಾನಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2022.

**ಸಭಾಪತಿಯವರು:-** ಈಗ ಸದನವನ್ನು 2.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 12 ಗಂಟೆ 27 ನಿಮಿಷಕ್ಕೆ ಮುಂದೂಡಿ ಮತ್ತೆ 2.00 ಗಂಟೆಗೆ ಸೇರಲು ನಿಶ್ಚಯಿಸಿತು)**

(099) 22-02-2022, 2.20 ಕೆಜಿ.ಜಿಆರ್

**(ಭೋಜನ ವಿರಾಮದ ನಂತರ ಸದನವು ಪುನಃ ಮಧ್ಯಾಹ್ನ 2 ಗಂಟೆ 20 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಸಭಾ ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಗೆ ಬಂದು ಧರಣಿಯಲ್ಲಿ ನಿರತರಾಗಿ ಸಚಿವರಾದ ಕೆ.ಎಸ್.ಈಶ್ವರಪ್ಪನವರ ವಿರುದ್ಧ ಧಿಕ್ಕಾರ ಕೂಗುತ್ತಿದ್ದರು)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ತಾವು ದಯಮಾಡಿ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:-** ಸದಸ್ಯರೇ, ಆಯಿತು ಕುಳಿತುಕೊಳ್ಳಿ.

**೦೮. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು:-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

1)ಕರ್ನಾಟಕ ವಿಧಾನ ಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ತಿದ್ದುಪಡಿ ವಿಧೇಯಕ 2022.

2)ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ತಿದ್ದುಪಡಿ ವಿಧೇಯಕ 2022.

**೦೯. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಉ) ಕರ್ನಾಟಕ ವಿಧಾನ ಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ 2022**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, 2022ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, 2015ನೇ ಸಾಲಿನಿಂದ ಇಲ್ಲಿಯವರೆಗೆ ವಿಧಾನ ಮಂಡಲದ ಶಾಸಕರ ಮತ್ತು ವಿಧಾನ ಪರಿಷತ್ತಿನ ಸದಸ್ಯರ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಣೆ ಮಾಡಿರಲಿಲ್ಲ. ಇತ್ತೀಚೆಗೆ cost ಹೆಚ್ಚಿಗೆ ಆಗಿರುವುದರಿಂದ ಇವರೆಲ್ಲರೂ ಕೆಲಸ

ಮಾಡುವುದು ಬಹಳ ಕಷ್ಟವಾಗಿದೆ ಎಂದು ತಿಳಿದುಕೊಂಡು ನಾವೆಲ್ಲರೂ ಬಹಳ ವೈಜ್ಞಾನಿಕವಾಗಿ ಚರ್ಚೆ ಮಾಡಿ ವೇತನದಲ್ಲಿ ಮತ್ತು ಭತ್ಯೆಗಳಲ್ಲಿ ಸರಿಸುಮಾರು 50% ರಷ್ಟು ಹೆಚ್ಚಿಗೆ ಮಾಡಿದ್ದೇವೆ. ಇದರ ಜೊತೆಗೆ ಒಂದು ಹೊಸದಾದ clause ಅನ್ನು introduce ಮಾಡಿದ್ದೇವೆ. 2023 onwards ಈ ರೀತಿ ನಾವು ಮಧ್ಯೆ ಮಧ್ಯೆ ವಿಧೇಯಕವನ್ನು ತರುವುದು ಬೇಡ, ಸ್ವಾಭಾವಿಕವಾಗಿ Cost Inflation Index ತೆಗೆದುಕೊಂಡು ವೇತನ ಮತ್ತು ಭತ್ಯೆಗಳನ್ನು ಹೆಚ್ಚಿಗೆ ಮಾಡಿಕೊಂಡು ಹೋಗುವಂತಹ ಸ್ಥಿತಿ Parliament ನಲ್ಲಿ ಯಾವ ತರಹ practice ನಲ್ಲಿದೆ, ನಾವು ಅದನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ಕಾನೂನಿನಲ್ಲಿ ಸೇರಿಸಿದ್ದೇವೆ. ಇದನ್ನು ಮಾನ್ಯ ಸದಸ್ಯರ ಹಿತದೃಷ್ಟಿಯಿಂದ ಮಾಡಿರುವುದರಿಂದ ಈ ವಿಧೇಯಕಕ್ಕೆ ಒಪ್ಪಿಗೆ ನೀಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ರ ಕರ್ನಾಟಕ ವಿಧಾನ ಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>**

**<u>ಖಂಡ 2 ರಿಂದ 22:</u>**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**ಖಂಡ 2 ರಿಂದ 22 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 22 ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ:**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ಶೀಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತ ವಿಧೇಯಕದ ಭಾಗವಾಗಿರುತ್ತದೆ"

**(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)**

**(ಮೊದಲನೆಯ ಖಂಡ, ಪೀಠಿಕೆ ಮತ್ತು ಶೀರ್ಷಿಕೆಗಳು ಪ್ರಸ್ತಾವನೆ ಹಾಗೂ ಅಧಿನಿಯಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, 2022ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಊ) ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ 2022**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು(ಮುಖ್ಯ ಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು, ಮುಖ್ಯ ಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಮಾನ್ಯ ವಿಧಾನ ಮಂಡಲದ ಸದಸ್ಯರ ವಿಧೇಯಕದಲ್ಲಿ ಪ್ರಸ್ತಾಪ ಮಾಡಿದ್ದೇನೆ, ಅದೇರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮಂತ್ರಿಗಳು, Chairman, Speaker, Deputy Chairman, Deputy Speaker ಇವರ ಯಾರ ವೇತನ ಮತ್ತು ಭತ್ಯೆಗಳನ್ನು revise ಮಾಡಿರಲಿಲ್ಲ. 2015ನೇ ಸಾಲಿನಿಂದ ಇಲ್ಲಿಯವರೆಗೆ ಯಾವುದೇ revision ಆಗಿಲ್ಲ. ಇತ್ತೀಚಿನ ದುಬಾರಿ ಬೆಲೆಗಳಲ್ಲಿ maintenance ಮಾಡುವುದು ಬಹಳ ಕಷ್ಟವಾಗುತ್ತದೆ ಎಂದು ತಿಳಿದುಕೊಂಡು ಈಗಿನ ಕಾಲಕ್ಕೆ ತಕ್ಕಂತೆ ಈಗಿನ ಧಾರಣೆಗಳನ್ನು ನೋಡಿಕೊಂಡು ಡೀಸೆಲ್, ಮನೆ ಬಾಡಿಗೆಗಳನ್ನು ಲೆಕ್ಕಚಾರ ಮಾಡಿ ಇವತ್ತು ಈ ವಿಧೇಯಕವನ್ನು ತಂದಿದ್ದೇವೆ. ಇದರಿಂದ ಸ್ವಲ್ಪ relief ಸಿಗಬಹುದು. ಆದ್ದರಿಂದ, ದಯಮಾಡಿ ಈ ವಿಧೇಯಕಕ್ಕೆ ಒಪ್ಪಿಗೆ ನೀಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ರ ಕರ್ನಾಟಕ ಮಂತ್ರಿಗಳ ಸಂಬಳಗಳು, ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 15:**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**ಖಂಡ 2 ರಿಂದ 15 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 15 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ:**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ಶೀಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ಪೀಠಿಕೆ ಮತ್ತು ಶೀರ್ಷಿಕೆಗಳು ಪ್ರಸ್ತಾವನೆ ಹಾಗೂ ಅಧಿನಿಯಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಉಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)(ಮುಖ್ಯ ಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಮಂತ್ರಿಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**10. ಶಿವಮೊಗ್ಗದಲ್ಲಿ ನಡೆದ ಘಟನೆಯ ಬಗ್ಗೆ.**

\- - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಶಿವಮೊಗ್ಗ ನಗರದಲ್ಲಿ ನಡೆದಂತಹ ಘಟನೆಯ ಬಗ್ಗೆ ನಾನು ತಮ್ಮ ಅನುಮತಿಯೊಂದಿಗೆ ಪ್ರಸ್ತಾಪ ಮಾಡಬಯಸುತ್ತೇನೆ. ಈ ನಾಡಿಗೆ ಸಮಾಜವಾದಿ ಚಳುವಳಿಯನ್ನು ಕೊಟ್ಟಂತಹ ನೆಲ ಶಿವಮೊಗ್ಗ. ಅಷ್ಟೇ ಎತ್ತರದ ನಾಯಕ ದಿವಂಗತ ಶ್ರೀ ಎಸ್.ಗೋಪಾಲ್‌ಗೌಡರವರನ್ನು ಕೊಟ್ಟಂತಹ ನೆಲ. ಇವತ್ತಿನ ದಿವಸ ಅಂತಹ ನೆಲ ಕೋಮು ದಳ್ಳುರಿಯಲ್ಲಿ ಅಕ್ಷರ ಸಹ ಬೆಂಕಿಗೆ ಅಹುತಿಯಾಗಿ ಬೇಯುತ್ತಿದೆ. ಅಲ್ಲಿ ಒಬ್ಬ ಯುವಕ "ಹರ್ಷ" ಎನ್ನುವವನ ಕೊಲೆಯಾಗಿದೆ. ಆ ನಂತರದಲ್ಲಿ ಸಾಮಾನ್ಯ ಜನರ ಮೇಲೆ ಅಲ್ಲಿನ ಅಂಗಡಿಗಳ ಮೇಲೆ ನಡೆದಿರುವಂತಹ ಹಲ್ಲೆಯ ಬಗ್ಗೆ ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಅಲ್ಲಿ 24 ವರ್ಷದ ಯುವಕ ಹರ್ಷ ಎಂಬುವವನು ಒಂದು ಅಂಗಡಿಯ ಮುಂದೆ ನಿಂತಿದ್ದಂತಹ ಸಂದರ್ಭದಲ್ಲಿ ಯಾರೋ ದಾರಿ ಹೋಕರು ಕಾರಿನಲ್ಲಿ ಬಂದು ಆತನನ್ನು ಹತ್ಯೆ ಮಾಡಿದ್ದಾರೆ. ಇದು ಅತ್ಯಂತ ಖಂಡನೀಯ. ಆತನಿಗೆ ಈ ಹಿಂದೆ ಆತಂಕ ಇತ್ತು. ಆತನಿಗೆ ಬೆದರಿಕೆ ಇತ್ತು. ಮಾನ್ಯ ಗೃಹ ಸಚಿವರು ಹೇಳಿ ಕೇಳಿ ಆ ಜಿಲ್ಲೆಯಿಂದ ಬರುತ್ತಿದ್ದಾರೆ. ಮಾನ್ಯ ಗೃಹ ಸಚಿವರು ಶಿವಮೊಗ್ಗ ಜಿಲ್ಲೆಗೆ ಸೇರಿದಂತಹವರು. ಆ ಯುವಕನಿಗೆ ಭೀತಿ ಇದ್ದಿದ್ದು ಪೋಲಿಸರಿಗೆ ಗೊತ್ತಿದೆ. ಅದು ಆ ಇಡೀ ಜಿಲ್ಲೆಗೆ ಗೊತ್ತಿದೆ. ಇವತ್ತಿನ ದಿವಸ ಆತನನ್ನು ರಕ್ಷಣೆ ಮಾಡುವಲ್ಲಿ ಸಂಪೂರ್ಣವಾಗಿ ಗೃಹ ಇಲಾಖೆ ಎಡವಿದೆ. ಅದು ಅನ್ಯಾಯದ ವಿಚಾರ. ನಾನು ಅದನ್ನು ಉಗ್ರವಾಗಿ ಖಂಡಿಸುತ್ತೇನೆ. ಇಡೀ ಸದನವು ಖಂಡಿಸಬೇಕು. ಯಾರು ಆತನ ಹಲ್ಲೆಗೆ ಕಾರಣರಾಗಿದ್ದಾರೆ ಅವರ ವಿರುದ್ಧ ಕ್ರಮವಾಗಬೇಕು. ಆ ಘಟನೆಯ ಬಗ್ಗೆ ಒಂದು ವಿವರವಾದಂತಹ ತನಿಖೆ ಆಗುವಂತಹ ದಿಸೆಯಲ್ಲಿ ಸರ್ಕಾರ ಮುಂದಾಗಬೇಕು ಮತ್ತು ತನಿಖೆಯನ್ನು ಘೋಷಣೆ ಮಾಡಬೇಕು.

**(ಮುಂದು)**

**(100) 22-02-2022 (2.30) ಎಂ.ವಿ-ಎಂಡಿ(ವಿಕೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ಬಹುಶಃ ಇವತ್ತಿನ ಪತ್ರಿಕೆಗಳನ್ನು ಬಿಚ್ಚಿ ನೋಡಿದರೆ, "ಶಿವಮೊಗ್ಗದಲ್ಲಿ ವ್ಯಾಪಕ ಹಿಂಸೆ, ಕರ್ಫ್ಯೂ, ಕಂಡ ಕಂಡಲ್ಲಿ ಕಲ್ಲು ತೂರಾಟ, 30 ಅಂಗಡಿ ಮತ್ತು 32 ವಾಹನಗಳಿಗೆ ಹಾನಿ, 10 ವಾಹನಗಳಿಗೆ ಬೆಂಕಿ, 20 ಮಂದಿಗೆ ಗಾಯ, ಮಚ್ಚು, ಲಾಂಗ್ ಮತ್ತು ದೊಣ್ಣೆಗಳ ಪ್ರದರ್ಶನ, ಗಾಳಿಯಲ್ಲಿ ಗುಂಡು, ಅಶ್ರುವಾಯು, ಲಾಠಿ ಪ್ರಹಾರ, ಹತ್ಯೆಗೆ ಆಕ್ರೋಶ, ಶಿವಮೊಗ್ಗ ಉದ್ವಿಗ್ನ, ಯುವಕನ ಹತ್ಯೆ ಶಿವಮೊಗ್ಗ ಧಗಧಗ, ಇವತ್ತು ಶಿವಮೊಗ್ಗ ಬೆಂಕಿ" ಈ ಶೀರ್ಷಿಕೆಗಳ ಅಡಿಯಲ್ಲಿ ಎಲ್ಲಾ ಪತ್ರಿಕೆಗಳಲ್ಲಿ ಈ ರೀತಿ ಪ್ರಕಟವಾಗಿದೆ. ಇವತ್ತು ಸಚಿವರ ಎದುರು, ಅಧಿಕಾರಿಗಳ ಎದುರು ಮತ್ತು ಪೋಲೀಸ್ ಅಧಿಕಾರಿಗಳ ಎದುರು ಈಗ ಅಲ್ಲಿದ್ದಂತಹ ಸಾವಿರಾರು ಜನ ಬಡಬಗ್ಗರು ಈಗಾಗಲೇ ಕೋವಿಡ್-19 ನಿಂದ ನಲುಗಿ ಹೋಗಿದ್ದಾರೆ. ಇವತ್ತು ಸಣ್ಣಪುಟ್ಟ ವ್ಯಾಪಾರಸ್ಥರ ಅಂಗಡಿ ಮತ್ತು ಮಳಿಗೆಗಳಿಗೆ ನುಗ್ಗಿ ಧ್ವಂಸ ಮಾಡಿರುವಂತಹ ಘಟನೆಯ ನಿದರ್ಶನ ಶಿವಮೊಗ್ಗದಲ್ಲಿ ನಡೆದು ಹೋಗಿದೆ. ಇವತ್ತು ಸುಮಾರು ಒಂದು ನೂರು ದ್ವಿಚಕ್ರ ವಾಹನಗಳಿಗೆ ಮತ್ತು 32 ನಾಲ್ಕು ಚಕ್ರದ ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಸುಮಾರು 25 ರಿಂದ 30 ಜನರ ಮೇಲೆ ಹತ್ಯೆ ನಡೆದು, ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಅಂತಹವರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅದೂ ಅಲ್ಲದೇ ಅದೆಷ್ಟೋ ಜನರ ಮನೆಗಳನ್ನು ಧ್ವಂಸ ಮಾಡಲಾಗಿದೆ. ಮತ್ತೆ ಕಂಡ ಕಂಡಲ್ಲಿ ಕಲ್ಲು ತೂರುವಂತಹ ಕೆಲಸ ನಡೆದಿದೆ. ನಾನು ಅದಕ್ಕೆ ಪ್ರಶ್ನೆ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ, ತಾವು ತಮ್ಮ ಮಾತನ್ನು short ಮಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಆಯಿತು. ಈಗ ನಾನು ವಿಚಾರಕ್ಕೆ ಬರುತ್ತೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ಇಂತಹ ಒಂದು ದೊಡ್ಡ ಘಟನೆ ಹಿಂದೆ ಎಂದೂ ಸಹ ನಡೆದಿರಲಿಲ್ಲ. ಈ ಒಂದು ಹತ್ಯೆ ಮತ್ತು ಹತ್ಯೆಯ ನಂತರದ ಘಟನೆಗಳು ಇದೇ ಪ್ರಥಮ. ಈಗ ನನ್ನ ಪ್ರಶ್ನೆ ಏನೆಂದರೆ, ಸರ್ಕಾರ ಎಲ್ಲಿಗೆ ಹೋಗಿದೆ? ಮಾನ್ಯ ಗೃಹ ಸಚಿವರು ಎಲ್ಲಿದ್ದಾರೆ? ನಾವು ನಾಗರಿಕ ಸರ್ಕಾರದಿಂದ ನಿರೀಕ್ಷೆ ಮಾಡಿದ್ದು ಇದೇನಾ? ಗೊತ್ತಿದ್ದು ಸಹ ಒಬ್ಬ ಯುವಕನ ಹತ್ಯೆಯಾಗುತ್ತದೆ, ಅನಂತರ, ಇಡೀ ಶಿವಮೊಗ್ಗ ಜಿಲ್ಲೆ ಹೊತ್ತಿ ಉರಿಯುತ್ತದೆ. ನಾವು ಮೊದಲೇ ತತ್ತರಿಸಿ ಹೋಗಿ, ಇವತ್ತಿನ ದಿವಸ ನೋವಿನಲ್ಲಿ ಇದ್ದೇವೆಂದು ನೂರಾರು, ಸಾವಿರಾರು ಜನರು ಕಣ್ಣೀರು

ಹಾಕುತ್ತಿದ್ದಾರೆ. ಹಾಗಾಗಿ, ದಯಮಾಡಿ ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ. ಆ ಹತ್ಯೆಗೆ ಸಂಬಂಧಪಟ್ಟಂತೆ ನ್ಯಾಯಾಂಗ ತನಿಖೆ ಆಗಬೇಕು. ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಬೇಕು. ಅನಂತರದ ಘಟನೆಗಳ ಮೇಲೂ ತನಿಖೆ ಆಗಬೇಕು. ಏಕೆಂದರೆ, ಇವತ್ತು ಸಾವಿರಾರು ಜನರು ಮನಬಂದಂತೆ ನುಗ್ಗಿ, ದಾಂಧಲೆ ಮಾಡಿ, ಗೂಂಡಾಗಿರಿ ಮಾಡಿ, ಅಕ್ಷರಶಃ ಧ್ವಂಸ ಮಾಡಿದ್ದಾರೆ. ಆ ನೊಂದವರಿಗೂ ಸಹ ನ್ಯಾಯ ಕೊಡಿಸುವಂತಹ ಕೆಲಸ ಆಗಬೇಕು. ಹಾಗೆಯೇ ಅವರಿಗೆ ಪರಿಹಾರ ಕೊಡಿಸುವಂತಹ ಕೆಲಸ ಕೂಡ ಆಗಬೇಕು. ಆ ಹತ್ಯೆಯಾದಂತಹ ಕುಟುಂಬ ಮತ್ತು ನೊಂದ ಎಲ್ಲಾ ಕುಟುಂಬಗಳಿಗೂ ನ್ಯಾಯ ಕೊಡಿಸುವಂತಹ ಕೆಲಸ ಆಗಬೇಕು. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಸರ್ಕಾರ ಕೂಡಲೇ ಹೇಳಿಕೆಯನ್ನು ನೀಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತಾ, ನ್ಯಾಯವನ್ನು ಒದಗಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಹಳ ವರ್ಷಗಳಿಂದ, ಶಿವಮೊಗ್ಗ ನಗರ ಬಹಳ ಶಾಂತವಾಗಿತ್ತು.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಿದ್ದರು)**

ಆ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಸಮಾಜದ ದುಷ್ಟ ಮತ್ತು ಸಮಾಜದ್ರೋಹಿ ಶಕ್ತಿಗಳು, ಮೊನ್ನೆಯ ದಿನ ರಾತ್ರಿ, ಮನೆಯ ಬಾಗಿಲಲ್ಲಿ ಇದ್ದಂತಹ ಒಬ್ಬ ಹುಡುಗನ ಮೇಲೆ, ಬಹಳ ದೊಡ್ಡ dagger ನಿಂದ ಇರಿದು ಅವನನ್ನು ಕೊಂದಿದ್ದಾರೆ. ಶಿವಮೊಗ್ಗ ನಗರದಲ್ಲಿ ಇರತಕ್ಕಂಥ ದುಷ್ಕರ್ಮಿಗಳಿಗಿಂತ, ಬೆಂಗಳೂರಿನಿಂದ ಬಂದಂತಹ ಇಬ್ಬರು, ಈ ಪ್ರಕರಣದಲ್ಲಿ ತೊಡಗಿದ್ದಾರೆ. ಈ ಹಿಂದೆ ಶ್ರೀ ವಿಶ್ವನಾಥ್ ಶೆಟ್ಟಿ ಎಂಬುವವರ ಕೊಲೆಯಾಗಿತ್ತು. ಆ ಸಂದರ್ಭದಲ್ಲಿ ಮಂಗಳೂರಿನ ಭಾಗದಿಂದ ಬಂದು, ಹಲ್ಲೆಯನ್ನು ಮಾಡಿ ಹೋಗತಕ್ಕಂತಹ, ಒಂದು ವ್ಯವಸ್ಥಿತವಾದಂತಹ ಷಡ್ಯಂತ್ರ ಹೊಂದಿರುವಂತಹ ಸಮಾಜ ವಿರೋಧಿ ಶಕ್ತಿಗಳು ಈ ರೀತಿಯ ಪ್ರಯತ್ನವನ್ನು ಆಗಾಗ್ಗೆ ಮಾಡುತ್ತಿದ್ದಾರೆ. ಅದು ಎಲ್ಲಿಗೆ ಹೋಗಿ ಮುಟ್ಟಿದೆ ಎಂದರೆ, ನಿನ್ನೆಯ ದಿವಸ, ಒಂದು ಪ್ರತಿಕ್ರಿಯೆಯನ್ನು ವ್ಯಕ್ತ ಮಾಡಿದ ಪರಿಣಾಮವಾಗಿ, ಈ ಸದನದ ಸದಸ್ಯರಾಗಿರುವಂತಹ ನಮ್ಮ ಅತ್ಯಂತ ಕಿರಿಯ ಸಹೋದರ ಶ್ರೀ ಡಿ.ಎಸ್.ಅರುಣ್‌ರವರಿಗೆ ಮೆಸೇಜ್ ಅನ್ನು ಹಾಕುತ್ತಾರೆ. ಅಂದರೆ, ಈಗ ಸತ್ತು ಹೋಗಿರುವವನು ಅವನು ಯಾರೋ ಇರಬಹುದು, ನಾಳೆ ನಿಮ್ಮ ಮನೆಯ ಹೆಣ್ಣು ಮಕ್ಕಳು ಮತ್ತು ಮಕ್ಕಳನ್ನು ಮುಗಿಸುತ್ತೇವೆ ಎನ್ನುವಂತಹ ಮೆಸೇಜ್ ಅನ್ನು ನಮ್ಮ ಶಾಸಕರಿಗೆ ಕಳುಹಿಸಿದ್ದಾರೆ. ಈ ರೀತಿಯ

ಹಿನ್ನೆಲೆಯಲ್ಲಿ ಪಿ.ಎಫ್.ಐ., ಸಿ.ಎಫ್.ಐ ಮತ್ತು ಎಸ್.ಡಿ.ಪಿ.ಐ ಇತ್ಯಾದಿ ಸಂಘಟನೆಗಳ ಹೆಸರು ಕೇಳಿ ಬರುತ್ತಿದೆ. ರಾಜ್ಯದಲ್ಲಿ ಸಮಾಜ ಶಾಂತವಾಗಿರುವುದಕ್ಕೆ ಈ ದುಷ್ಟ ಶಕ್ತಿಗಳು ಬಿಡುವುದಿಲ್ಲ. ಎಲ್ಲಾ ಕಡೆಗಳಲ್ಲಿ ಕೋಮು ಗಲಭೆಗಳಾದಾಗ, ಈ ಎಲ್ಲಾ ಸಂಘಟನೆಗಳ ಹೆಸರು ಹೊರಗಡೆ ಬರುತ್ತಿದೆ. ಆದುದರಿಂದ, ಈ ಸಂಘಟನೆಗಳನ್ನು ನಿಷೇಧ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸಮಾಜದಲ್ಲಿ ಶಾಂತಿಯನ್ನು ಕದಡುವಂತಹ ಯಾವುದೇ ಶಕ್ತಿ ದಮನವಾಗಬೇಕು. ಜೊತೆಗೆ ಒಬ್ಬ ಅಮಾಯಕ ಹುಡುಗ, ಟೈಲರ್ ಆಗಿರುವಂತಹ ಒಬ್ಬ ಬಡವನ ಮಗ ದಿವಂಗತ ಹರ್ಷ ಕೇವಲ ಏಳು ಸಾವಿರ ರೂಪಾಯಿಗಳಿಗೆ ಕೆಲಸವನ್ನು ಮಾಡುತ್ತಿದ್ದ. ಅವನು ತಂದೆ ತಾಯಿಗೆ ಒಬ್ಬನೆ ಮಗ. ಈಗ ಆ ಕುಟುಂಬ ಅನಾಥವಾಗಿದೆ. ಆ ಕುಟುಂಬದವರಿಗೆ ಸರ್ಕಾರದ ಕಡೆಯಿಂದ ಆರ್ಥಿಕ ಸಹಾಯವನ್ನು ಮಾಡಬೇಕು. ನಿನ್ನೆ ರಾತ್ರಿಯಿಂದ ಶಿವಮೊಗ್ಗ ಜಿಲ್ಲೆ ಕಂಟ್ರೋಲ್‌ನಲ್ಲಿ ಇದೆ. ಸಚಿವರಾಗಿರುವಂತಹ ಸನ್ಮಾನ್ಯ ಕೆ.ಎಸ್.ಈಶ್ವರಪ್ಪನವರು ಮತ್ತು ಮಾನ್ಯ ಗೃಹ ಸಚಿವರು ಸಹ ಅಲ್ಲಿಗೆ ಭೇಟಿಯನ್ನು ನೀಡಿದ್ದಾರೆ. ಈಗ ನನ್ನ ಮನವಿ ಏನೆಂದರೆ, ಬೇರೆ ಯಾರೇ ಆಗಿರಲಿ, ರಾಜಕಾರಣದ ಉದ್ದೇಶಕ್ಕೋಸ್ಕರ ಪ್ರಚೋದನೆ ನೀಡುವಂತಹ ಯಾವುದೇ ರೀತಿಯ ಹೇಳಿಕೆಗಳನ್ನು ಕೊಡಬಾರದು. ಶಿವಮೊಗ್ಗವನ್ನು ಶಾಂತವಾಗಿ ಇರಿಸುವುದಕ್ಕೆ ಪ್ರಯತ್ನಿಸುತ್ತಿರುವ ಸರ್ಕಾರದ ಪ್ರಯತ್ನ ಮತ್ತು ಪೋಲೀಸ್ ಪ್ರಯತ್ನಗಳಿಗೆ ನಮ್ಮ ಸಹಕಾರವನ್ನು ಕೊಡಬೇಕು. ನಮ್ಮ ಗೆಳೆಯ ಶ್ರೀ ಡಿ.ಎಸ್. ಅರುಣ್‌ರವರಿಗೆ ಬಂದಂತಹ ಬೆದರಿಕೆ, ನಾಳೆಯ ದಿವಸ ಬೇರೆ ಯಾವುದೇ ಶಾಸಕರಿಗೂ ಬರಬಹುದು. ದುಷ್ಕರ್ಮಿಗಳಿಗೆ ಪಕ್ಷದ ಬೇಧವಿಲ್ಲ. ಹಿಂದೂ ಎಂದು ಮಾತನಾಡಿದವರ ಮೇಲೆ ಹಲ್ಲೆ ಮಾಡುತ್ತೇವೆ ಎನ್ನುವಂಥದ್ದು, ಅದು ಸಮಾಜದ್ರೋಹಿಯ ಮನಸ್ಥಿತಿ. ಆ ಕಾರಣಕ್ಕೆ ಮಾನ್ಯ ಶಾಸಕರುಗಳಿಗೆ ರಕ್ಷಣೆಯನ್ನು ಕೊಡಬೇಕು. ಮಾನ್ಯ ಡಿ.ಎಸ್.ಅರುಣ್‌ರವರಿಗೆ ಅಪಾಯದ ಬೆದರಿಕೆ ಬಂದಿದೆ. ನಾಳೆಯ ದಿವಸ ಅವರ ಮೇಲೆ ಏನೂ ಆಗದೇ ಇರುವಂತಹ ಎಲ್ಲಾ ರೀತಿಯ ಎಚ್ಚರಿಕೆಯಿಂದ ಅವರಿಗೆ ಪೋಲೀಸ್ ರಕ್ಷಣೆಯನ್ನು ಕೊಡಬೇಕು. ಈ ಎಸ್.ಡಿ.ಪಿ.ಐ., ಸಿ.ಎಫ್.ಐ ಮತ್ತು ಪಿ.ಎಫ್.ಐ ಸಂಘಟನೆಗಳನ್ನು ನಿಷೇಧ ಮಾಡಬೇಕೆಂದು, ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಶಿವಮೊಗ್ಗ ನಗರದಲ್ಲಿ ನಡೆದಿರುವಂತಹ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅಲ್ಲಿ ಗಲಾಟೆಯಾದ ನಂತರ ಅಲ್ಲಿಗೆ ಸರ್ಕಾರ ಸೆಕ್ಷನ್ 144 ಅನ್ನು ಹಾಕಿದೆ. ಅಂದರೆ, ಕರ್ಫ್ಯೂ ವಿಧಿಸಿದ್ದಾರೆ. ಕರ್ಫ್ಯೂ ಆದಮೇಲೆ, ಸರ್ಕಾರದ ಮಂತ್ರಿ ಆ

ಮೆರವಣಿಗೆಯಲ್ಲಿ ಹೋಗುತ್ತಾರೆ. ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಅವರು ತತ್‌ಕ್ಷಣವೇ ಆ ಮಂತ್ರಿಗಳ ರಾಜೀನಾಮೆಯನ್ನು ಪಡೆದುಕೊಳ್ಳಬೇಕು. ಈಗ ಸರ್ಕಾರ ಪ್ರೇರಿತ ದಂಗೆಯಲ್ಲಿ, ಕೊಲೆಯಾದ ಮೇಲೆ ನಡೆದಂತಹ ಘಟನೆ, ಅದು ಸರ್ಕಾರ ಪ್ರೇರಿತ. ಅಲ್ಲಿ ಇರುವಂತಹ ಅಮಾಯಕರ ಮೇಲೆ ಹಲ್ಲೆಯಾಗಿದೆ. ಅಲ್ಲಿನ ಅಮಾಯಕರ ಮನೆಗಳು ಹಾಳಾಗುತ್ತಿವೆ ಮತ್ತು ಲೂಟಿ ಮಾಡಿದ್ದಾರೆ. ಏನು ಎಸ್.ಡಿ.ಪಿ.ಐ ಸಂಘಟನೆ ಇದೆ ಅವುಗಳನ್ನು ನಿಷೇಧ ಮಾಡಬೇಕು. ಭಾರತೀಯ ಜನತಾ ಪಕ್ಷದ ಸರ್ಕಾರ ಎಲ್ಲಾ ಸಂಘಟನೆಗಳನ್ನು ನಿಷೇಧ ಮಾಡಬೇಕು. ಮಾನ್ಯ ಕೆ.ಎಸ್. ಈಶ್ವರಪ್ಪನವರು ಅಲ್ಲಿಗೆ **(ಗೊಂದಲ)** ಚರ್ಚೆ ಮಾಡುವುದಕ್ಕೆ ಹೋಗಿದ್ದಾರೆ. ಮಾನ್ಯ ಕೆ.ಎಸ್. ಈಶ್ವರಪ್ಪನವರು ಅಲ್ಲಿ ದಂಗೆ ಮಾಡಿಸಿದ್ದಾರೆ. ಅಲ್ಲಿ ಸೆಕ್ಷನ್ 144 ಇದ್ದರೂ ಸಹ....

**(ಗೊಂದಲ)**

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಿದ್ದರು)**

**ಸಭಾಪತಿಯವರು:-** ಮಾನ್ಯ ಸಚಿವರು ಇದಕ್ಕೆ ಸಂಬಂಧಪಟ್ಟಂತೆ ಸದನಕ್ಕೆ ಉತ್ತರ ನೀಡುತ್ತಾರೆ. ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪುಟ್ಟಣ್ಣನವರೆ, ಈಗ ಮಾನ್ಯ ಸಚಿವರು ಉತ್ತರ ನೀಡುವಾಗ ನಿಮ್ಮ ತಕರಾರು ಏನು?

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ನನ್ನದು ಏನು ತಕರಾರು ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರು ಮಾತನಾಡಲಿ. ಈಗ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಧರಣಿ ಮಾಡುತ್ತಿದ್ದಾರೆ. ಈಗ ಅವರೆಲ್ಲರೂ ಸಹ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬಹುದಲ್ಲವೇ? ಸದನ ನಡೆಯಲ್ಲಿ, ಆಗ ಎಲ್ಲರೂ ಮಾತನಾಡಲಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ ಬೇಡ.

**(ಗೊಂದಲ)**

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಈಗ ಕಾಂಗ್ರೆಸ್ ಪಕ್ಷದ ಸದಸ್ಯರು...

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈಗ ಕಾಂಗ್ರೆಸ್ ಪಕ್ಷದ ಸದಸ್ಯರು ಭಾಷಣ ಮಾಡುತ್ತಾ....

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೆ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ಒಂದು ಕಡೆ ಮಾತನಾಡುತ್ತಿದಾರೆ. ಅವರ ಪಕ್ಷದವರು ಬಾವಿಗೆ ಬಂದು ಧರಣಿ ಮಾಡುತ್ತಿದ್ದಾರೆ. ಇದು ಸರಿಯೇ? ಈ ರೀತಿ ಮಾಡುವುದು ಸರಿಯಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಇನ್ನು yield ಆಗಿಲ್ಲ.

**(ಗೊಂದಲ)**

**ಸಭಾಪತಿಯವರು:-** ನಾನು ಹೇಳುವುದನ್ನು ಕೇಳುತ್ತೀರೋ ಇಲ್ಲವೋ? ಒಂದು ನಿಮಿಷ ನನ್ನ ಮಾತು ಕೇಳಿ. ಈಗ ಯಾವುದೇ ಒಬ್ಬ ಸದಸ್ಯರು ಮಾತನಾಡುತ್ತೇನೆಂದರೆ ನಾನು ನಿರ್ಣಯ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಅವರು ಯಾವ ವಿಷಯದ ಮೇಲೆ ಮಾತನಾಡುತ್ತಾರೋ ಮಾತನಾಡಲಿ. ಅವರು ಮಾತನಾಡಿದ ನಂತರ ಮಾನ್ಯ ಸಚಿವರು ಅದಕ್ಕೆ ಉತ್ತರ ಹೇಳಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದು ಕಾಂಗ್ರೆಸ್‌ನ double standard ಅಲ್ಲವೇ?

**(ಗೊಂದಲ)**

**ಸಭಾಪತಿಯವರು:-** ಶ್ರೀ ಎನ್.ರವಿಕುಮಾರ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಸ್ಥಾನದಲ್ಲಿ ಭಾಷಣ ಮಾಡುತ್ತಾರೆ. ಮತ್ತೆ ಬಾವಿಯಲ್ಲಿ ಸದಸ್ಯರು ಧರಣಿಯನ್ನೂ ಸಹ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರಿಗೆ ಧೈರ್ಯ ಇದ್ದರೆ ಎಸ್.ಡಿ.ಪಿ.ಐ.ಯನ್ನು ನಿಷೇಧ ಮಾಡಲಿ. **(ಗೊಂದಲ)** ಭಾರತೀಯ ಜನತಾ ಪಕ್ಷದವರಿಗೆ ಧೈರ್ಯ ಇದೆಯೇ, ಧೈರ್ಯ ಇದ್ದರೆ ಆ ಸಂಘಟನೆಗಳನ್ನು ಬ್ಯಾನ್ ಮಾಡಲಿ ನೋಡೋಣ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮಂತ್ರಿಗಳ ಹೇಳಿಕೆ ಬಿಟ್ಟು, ಬೇರೆ ಯಾವ ಸದಸ್ಯರ ಹೇಳಿಕೆಯೂ ಸಹ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿ ಮಾನ್ಯ ಮಂತ್ರಿಗಳ ಹೇಳಿಕೆ ಬಿಟ್ಟು ಬೇರೆ ಯಾವುದೇ ಸದಸ್ಯರ ಹೇಳಿಕೆಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ**,** ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿರುವ ಘಟನೆಯ ಬಗ್ಗೆ ಮಾತನಾಡಿದ್ದಾರೆ. ಕಳೆದ ಎರಡು ವರ್ಷಗಳಿಂದ ಆತನಿಗೆ ಪ್ರಾಣಬೆದರಿಕೆಗಳನ್ನು ಹಾಕುತ್ತಿದ್ದರು, ನೀವು ಅದನ್ನು watch ಮಾಡಬೇಕಾಗಿತ್ತು ಮತ್ತು security provide ಮಾಡಬೇಕಾಗಿತ್ತೆಂದು ಹೇಳಿದ್ದಾರೆ. ಸಾಮಾನ್ಯ ಆಡಳಿತದಲ್ಲಿ ಇದನ್ನು ಮಾಡುವುದು ತುಂಬಾ ಕಷ್ಟ. ಹಾಗಾಗಿ ಇಂತಹ ಸಮಯಗಳು ಬರುತ್ತಿರುತ್ತವೆ ಮತ್ತು ಹೋಗುತ್ತಿರುತ್ತವೆ. ಇಂತಹ ಪ್ರಕ್ಷುಬ್ಧ ಪರಿಸ್ಥಿತಿ ಉದ್ಭವವಾಗಬಹುದೆಂದು ಯಾರೂ ನಿರೀಕ್ಷೆ ಮಾಡಿರಲಿಲ್ಲ. ಶ್ರೀ ಹರ್ಷರವರು ಮೃತರಾಗಿದ್ದಾರೆ ನಾವು ಅದಕ್ಕೆ ಖೇದ ವ್ಯಕ್ತಪಡಿಸುತ್ತೇವೆ ಮತ್ತು ಅದು ದುರ್ದೈವವೆಂದು ಭಾವಿಸುತ್ತೇವೆ.

**(ಮುಂದು...**

(101) 22.02.2022 02.40 LL-MD(VK) **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜೆ.ಸಿ. ಮಾಧುಸ್ವಾಮಿ(ಮುಂದು):-**

ನಾವು ಅದನ್ನು ದುರ್ದೈವ ಎಂದು ಭಾವಿಸುತ್ತೇವೆ. ಆದರೆ, ಸರ್ಕಾರ ಯಾವುದೇ ಕಾರಣಕ್ಕೆ ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆ ಮಾಡುವುದರಲ್ಲಿ ವಿಫಲವಾಗಿರುವುದಿಲ್ಲ ಹಾಗೂ ವಿಫಲ ಆಗುವುದು ಇಲ್ಲ. ಯಾರು miscreants ಇದ್ದಾರೆ ಅವರು ಯಾವುದೇ ಭಾಗದಲ್ಲಿರಲಿ, ಅವರು ಏನಾದರೂ ಉದ್ರಿಕ್ತ ಪರಿಸ್ಥಿತಿ ನಿರ್ಮಾಣ ಮಾಡುತ್ತಾ ಹೋದರೆ, ಇದನ್ನು precipitate ಮಾಡುತ್ತಾ ಹೋದರೆ, ಖಂಡಿತವಾಗಿ ನಾವು ಅವರ ವಿರುದ್ಧ ಕ್ರಮ ಜರುಗಿಸುತ್ತೇವೆ. ನಿನ್ನೆಯ ದಿವಸ ಆಕಸ್ಮಿಕವಾಗಿ ದಿಢೀರ್ ಎಂದು ಏನು ಘಟನೆ ಆಗಿ, ಸಣ್ಣ-ಪುಟ್ಟ ವ್ಯತ್ಯಾಸಗಳಾಗಿರುವುದನ್ನು ನಾವು ಗಮನಕ್ಕೆ ತೆಗೆದುಕೊಂಡಿರುತ್ತೇವೆ. Government will certainly initiate appropriate action and book cases against all the culprits. ನಾವು ಇದನ್ನು ಹತೋಟಿಗೆ ತೆಗೆದುಕೊಳ್ಳುತ್ತೇವೆ. ಶಿವಮೊಗ್ಗ ಈಗಾಗಲೇ ಹತೋಟಿಗೆ ಬಂದಿರುತ್ತದೆ. ನಿನ್ನೆಯ ದಿವಸ ರಾತ್ರಿಯಿಂದ ಶಿವಮೊಗ್ಗದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಆಗಿರುವುದಿಲ್ಲ. ಇಲ್ಲಿಂದ ಮುಂದೆ ಶಿವಮೊಗ್ಗದಲ್ಲಿ ಶಾಂತಿ ಸುವ್ಯವಸ್ಥೆ ಸ್ಥಾಪಿಸುವುದಕ್ಕೆ ಸರ್ಕಾರ ಎಲ್ಲಾ ರೀತಿಯ ವ್ಯವಸ್ಥೆ ಮಾಡಿರುತ್ತದೆ. ಅದನ್ನು ನಿಭಾಯಿಸುವುದಕ್ಕೆ ಸರ್ಕಾರ ಸಮರ್ಥವಾಗಿದೆ. ಈಗ ಏನು ಘಟನೆ ಆಗಿದೆ, ಅದಕ್ಕೆ ನಾವು ವಿಷಾದ ವ್ಯಕ್ತಪಡಿಸಿ, ಇನ್ನು ಮುಂದೆ ಇಂತಹ ಘಟನೆಗಳು ಆಗದ ರೀತಿಯಲ್ಲಿ ಎಲ್ಲಾ ರೀತಿಯ ಕಾನೂನು ಕ್ರಮಗಳನ್ನು ನಾವು ಜರುಗಿಸುತ್ತೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಈಗ ಎಲ್ಲವನ್ನೂ ನಾವು ಸಮರ್ಥವಾಗಿ ನಿರ್ವಹಣೆ ಮಾಡಿದ್ದೇವೆಂದರೆ ಅಥವಾ ನಾವು ಸರಿಯಾಗಿ ಆಡಳಿತ ನಡೆಸಿದ್ದೇವೆಂದರೆ, ಆ ಹತ್ಯೆ ಹೇಗೆ ಆಗುತ್ತಿತ್ತು?

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ, ಸಾಕು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಹೇಳಿರುತ್ತಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆದರೆ ಸದರಿ ಹತ್ಯೆಯ ಬಗ್ಗೆ ನ್ಯಾಯಾಂಗ ತನಿಖೆ ಬಗ್ಗೆ ಘೋಷಣೆ ಮಾಡಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಅದನ್ನೇ ಎಷ್ಟು ಬಾರಿ ಕೇಳುತ್ತೀರಿ? ದಯಮಾಡಿ, ಕುಳಿತುಕೊಳ್ಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಹತ್ಯೆಯ ಘಟನೆ ಮತ್ತು ಅನಂತರದ ಘಟನೆಗಳ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕಲ್ಲವೇ? ಈ ಕುರಿತು ನ್ಯಾಯಾಂಗ ತನಿಖೆ ಆಗಲೇಬೇಕು. ಇವೊತ್ತಿನ ದಿವಸ ಶಿವಮೊಗ್ಗ ಜಿಲ್ಲೆಯನ್ನು ಇವರು ಹತೋಟಿಗೆ ತೆಗೆದುಕೊಳ್ಳಲಿಲ್ಲವೆಂದರೆ, ಈ ರಾಜ್ಯವನ್ನು ಹೇಗೆ ಆಳುತ್ತಾರೆ?

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಹಾಗೂ ಸಣ್ಣ ನೀರಾವರಿ ಸಚಿವರು);-** ಮಾನ್ಯ ಸಭಾಪತಿಯವರೇ, ಕರ್ನಾಟಕ ಪೋಲೀಸ್ ವ್ಯವಸ್ಥೆ ಸಮರ್ಥವಾಗಿದೆ. ಈ ವಿಷಯದಲ್ಲಿ ಏನು ತನಿಖೆ ಮಾಡಬೇಕು ಹಾಗೂ ಯಾವ ಕಾನೂನು ಜರುಗಿಸಬೇಕು ಅದನ್ನು ನಾವು ಜರುಗಿಸುತ್ತೇವೆ. ಕರ್ನಾಟಕ ಪೋಲೀಸ್ ವ್ಯವಸ್ಥೆ ಇರಬೇಕಾದರೆ, ಬೇರೆ ಯಾವುದೇ ವ್ಯವಸ್ಥೆಯಲ್ಲಿ ತನಿಖೆ ಮಾಡಬೇಕಾದ ಅಗತ್ಯ ಸರ್ಕಾರಕ್ಕೆ ಕಂಡುಬಂದಿರುವುದಿಲ್ಲ. ಅದರಂತೆ, ನಮ್ಮ ಪೋಲೀಸ್ ವ್ಯವಸ್ಥೆಯನ್ನು ಇಟ್ಟುಕೊಂಡು ಈ ವಿಚಾರದಲ್ಲಿ ಸಮಗ್ರವಾದ ತನಿಖೆ ಮಾಡಿ, culprits ಯಾರು ಇದ್ದಾರೆ ಅವರ ವಿರುದ್ಧ ಸೂಕ್ತ ಕ್ರಮವನ್ನು ಕಡ್ಡಾಯವಾಗಿ ತೆಗೆದುಕೊಳ್ಳುತ್ತೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಆಯಿತು. ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನ್ಯಾಯಾಂಗ ತನಿಖೆ ಘೋಷಣೆ ಮಾಡದೇ ಇರುವ ಸರ್ಕಾರದ ಕ್ರಮವನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

**(ಈ ಹಂತದಲ್ಲಿ ಸರ್ಕಾರದ ಕ್ರಮವನ್ನು ಖಂಡಿಸಿ, ಜೆ.ಡಿ.(ಎಸ್) ಪಕ್ಷದ ಶಾಸಕರುಗಳು ಸಭಾತ್ಯಾಗವನ್ನು ಮಾಡಿದರು)**

**11. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ತಾವು ಮಾತನಾಡುತ್ತೀರಾ?

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇಲ್ಲ.

**ಸಭಾಪತಿಯವರು:-** ಹಾಗಾದರೆ, ಈಗ ಸರ್ಕಾರದಿಂದ ಉತ್ತರ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ನಾಯಕರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಡಾ: ವೈ.ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಸದನದ ಬಾವಿಯಲ್ಲಿ ನಿಂತು ಘೋಷಣೆಗಳನ್ನು ಕೂಗುತ್ತಿರುವ ಮಾನ್ಯ ಸದಸ್ಯರುಗಳನ್ನು ತಮ್ಮ ಸ್ಥಾನಕ್ಕೆ ತೆರಳಲು ತಾವು ದಯಮಾಡಿ ಸೂಚನೆ ನೀಡಬೇಕು.

**(ಗೊಂದಲ)**

**ಸಭಾಪತಿಯವರು:-** ಆಯಿತು, ನಾನು ಹೇಳುತ್ತೇನೆ. ತಾವು ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರು...

**(ಗೊಂದಲ)**

**ಸಭಾಪತಿಯವರು:-** ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ. ಸದನದ ಬಾವಿಯಲ್ಲಿ ಧರಣಿ ನಿರತರಾಗಿರುವ ಮಾನ್ಯ ಸದಸ್ಯರು ಮಾತನಾಡಬಾರದು. ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಉತ್ತರ ಹೇಳುತ್ತಿದ್ದಾರೆ. ದಯಮಾಡಿ ಎಲ್ಲರೂ ಐದು ನಿಮಿಷ ಸುಮ್ಮನಿರಿ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ,...

(ಗೊಂದಲ)

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತು ಮಾತನಾಡುವಾಗ ಈ ರೀತಿ ಧಿಕ್ಕಾರ ಕೂಗಿದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:-** ಆಯಿತು, ನಾನು ಏನು ಮಾಡಬೇಕೆಂದು ತಾವು ಹೇಳುತ್ತಿದ್ದೀರಿ? ಈಗ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಉತ್ತರ ಹೇಳುತ್ತಾರೆ ಬಿಡಿ. ಮಾನ್ಯ ಮುಖ್ಯಮಂತ್ರಿಗಳೇ ತಾವು ಸರ್ಕಾರದ ಉತ್ತರವನ್ನು ಪ್ರಾರಂಭ ಮಾಡಿ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಈಗಾಗಲೇ ಭಾಷಣವನ್ನು ಮಾಡಿದ್ದಾರೆ. ಈ ವಂದನಾ ನಿರ್ಣಯದ ಕುರಿತಾದ ಚರ್ಚೆಯಲ್ಲಿ ಇವೊತ್ತಿನ ದಿವಸ ಮಾನ್ಯ ವಿರೋಧ ಪಕ್ಷದವರು ಮಾತನಾಡಬೇಕಾಗುತ್ತದೆ. ಇದು ಅತ್ಯಂತ ನೋವಿನ ಸಂಗತಿಯಾಗಿದೆ. ಕರ್ನಾಟಕ ವಿಧಾನ ಮಂಡಲದ ಇತಿಹಾಸದಲ್ಲಿ ಘನತೆವೆತ್ತ ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಪ್ರಥಮ ಬಾರಿಗೆ ವಿರೋಧ ಪಕ್ಷದವರು ಭಾಗವಹಿಸದೇ ಇರುವಂಥದ್ದು ಹಾಗೂ ಅದು ಚರ್ಚೆಯಾಗದೇ ಉತ್ತರ ಕೊಡುವಂತಹ ಪರಿಸ್ಥಿತಿ ಬಂದಿರುವಂಥದ್ದು, ಅತ್ಯಂತ ನೋವಿನ ಸಂಗತಿಯಾಗಿದೆ. ಇದು ಕರ್ನಾಟಕ ವಿಧಾನ ಮಂಡಲದ ಇತಿಹಾಸದಲ್ಲಿ ಇವೊತ್ತಿನ ದಿವಸ ವಿರೋಧ ಪಕ್ಷದವರು ತಮ್ಮ ಜವಾಬ್ದಾರಿಯನ್ನು ಮರೆತು ನಡೆದುಕೊಂಡಿರುವಂಥದ್ದು ಒಂದು ಕಪ್ಪು ಚುಕ್ಕೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಮಾನ್ಯ ಮುಖ್ಯಮಂತ್ರಿಯವರ ಮಾತಿಗೆ ಮೇಜು ತಟ್ಟಿ ಬೆಂಬಲ ಸೂಚಿಸಿದರು)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ನಮ್ಮ ಪಕ್ಷದ ಮೂರು ಜನ ಸದಸ್ಯರು ಮಾತನಾಡಿರುತ್ತಾರೆ. ನಾವು ಪಾಲ್ಗೊಂಡಿರುವುದಿಲ್ಲವೆಂದು ಅಲ್ಲ. ದಯಮಾಡಿ ಅದನ್ನು ತಾವು ಸರಿಪಡಿಸಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಕಳೆದ ಒಂದು ವರ್ಷದಿಂದ ಈ ರಾಜ್ಯದ ಪರಿಸ್ಥಿತಿ ಯಾವ ರೀತಿ ಇತ್ತು,..

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದನ್ನು ಕಡತದಿಂದ ತೆಗೆಯಬೇಕು.

**(ಗೊಂದಲ)**

**ಸಭಾಪತಿಯವರು:-** ಹೌದು. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ವಿರೋಧ ಪಕ್ಷದಿಂದ ಮೂರು ಜನ ಸದಸ್ಯರು ಮಾತನಾಡಿರುತ್ತಾರೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವ ಮಾತಿನ ಅರ್ಥ ಏನೆಂದರೆ, ರಾಜ್ಯಪಾಲರ ಭಾಷಣದ ಮೇಲೆ ಪೂರ್ಣ ಪ್ರಮಾಣದ ಚರ್ಚೆ ಆಗಬೇಕಾಗಿತ್ತು.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರಿಂದ ರಾಜೀನಾಮೆ ಕೊಡಿಸಬೇಕಾಗಿತ್ತು. ಆಗ ನಾವು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುತ್ತಿದ್ದೆವು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಕಳೆದ ಒಂದು ವರ್ಷದ ತನ್ನ ಸಾಧನೆಗಳನ್ನು ಹೇಳಿದಾಗ, ನ್ಯೂನತೆಗಳನ್ನು ಎತ್ತಿ ಹಿಡಿಯುವಂತಹ ಒಂದು ಅವಕಾಶ ವಿರೋಧ ಪಕ್ಷದವರಿಗೆ ಇತ್ತು. ಅದನ್ನು ಅವರು ಬಳಕೆ ಮಾಡಿಕೊಳ್ಳಲಿಲ್ಲವೆನ್ನುವುದನ್ನು ನಾನು ಹೇಳುತ್ತಿದ್ದೇನೆ. ಇವೊತ್ತಿನ ದಿವಸ ಇತಿಹಾಸದಲ್ಲಿ ಪೂರ್ಣ ಪ್ರಮಾಣದಲ್ಲಿ ಚರ್ಚೆಯಾಗದೇ ಇರುವಂಥದ್ದು... **(ಗೊಂದಲ)** ಕಳೆದ ಒಂದು ವರ್ಷ ತಮಗೆಲ್ಲಾ ಗೊತ್ತಿರುವಂತೆ ಕೋವಿಡ್-19 ಮಹಾಮಾರಿ ನಮ್ಮೆಲ್ಲರನ್ನೂ ಬಹಳ ದಿಗ್ಭ್ರಮೆಗೊಳಿಸಿರುತ್ತದೆ. ಪೂರ್ಣ ಪ್ರಮಾಣದಲ್ಲಿ ನಮ್ಮ ಇಡೀ ಬದುಕನ್ನೇ

ತಡೆಗಟ್ಟುವಂತಹ ಕೆಲಸ ಇಡೀ ವಿಶ್ವದಾದ್ಯಂತ, ದೇಶದಾದ್ಯಂತ ಮತ್ತು ನಮ್ಮ ರಾಜ್ಯದಲ್ಲಿಯೂ ಸಹ ಆಯಿತು. ಅಂತಹ ಒಂದು ಸಂದರ್ಭದಲ್ಲಿ ನಮ್ಮ ನಾಯಕರು ಮತ್ತು ಹಿಂದಿನ ಮುಖ್ಯಮಂತ್ರಿಯವರಾಗಿದ್ದಂತಹ ಶ್ರೀ ಬಿ.ಎಸ್. ಯಡಿಯೂರಪ್ಪನವರು ಇದನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದರು. ಹಲವಾರು ಸಭೆಗಳನ್ನು ಮಾಡಿದ್ದರು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡರು. ಟಾಸ್ಕ್‌ಫೋರ್ಸ್ ಅನ್ನು ರಚನೆ ಮಾಡಿದರು. ಈ ಕೋವಿಡ್-19 ನಿರ್ವಹಣೆಗೆ ಎರಡು ಸಾವಿರ ಕೋಟಿಗಿಂತಲೂ ಹೆಚ್ಚು ಹಣವನ್ನು ಕೊಟ್ಟರು.

ಆ ಸಂದರ್ಭದಲ್ಲಿ ನಮ್ಮ ರಾಜ್ಯದ ಆರೋಗ್ಯ ವ್ಯವಸ್ಥೆ ಇಷ್ಟು ದೊಡ್ಡ ಪ್ರಮಾಣದ ಕೋವಿಡ್-19 ಸಮಸ್ಯೆಯನ್ನು ನಿಭಾಯಿಸುವ ಸಾಧ್ಯತೆ ಹೊಂದಿರಲಿಲ್ಲ. ಏಕೆಂದರೆ, ಇವೊತ್ತಿನ ದಿವಸ ನಾವು ನಮ್ಮ ಆರೋಗ್ಯ ವ್ಯವಸ್ಥೆಯನ್ನು ಅಷ್ಟು ಪ್ರಮಾಣದಲ್ಲಿ build-up ಮಾಡಿರಲಿಲ್ಲ. ಆದರೆ, ಸಾವಿರಾರು ಜನ ಒಂದೇ ದಿನ ಆಸ್ಪತ್ರೆಗೆ ಬರುವಂತಹ ಸಂದರ್ಭದಲ್ಲಿ ನಾವು ವಿಶೇಷವಾದಂತಹ ಪ್ರಯತ್ನವನ್ನು ಮಾಡಿ, ಪಿ.ಹೆಚ್.ಸಿ. ನಿಂದ, ತಾಲ್ಲೂಕು ಕೇಂದ್ರಗಳಿಂದ, ಜಿಲ್ಲಾ ಆಸ್ಪತ್ರೆ ಮತ್ತು ಎಲ್ಲಾ ಕಡೆಗಳಲ್ಲಿಯೂ ಸಹ ಇವೊತ್ತಿನ ದಿವಸ ಬೆಡ್‌ಗಳ ಸಾಮರ್ಥ್ಯ, ಐ.ಸಿ.ಯು. ಬೆಡ್‌ಗಳ ಸಾಮರ್ಥ್ಯ ಮತ್ತು ವೆಂಟಿಲೇಟರ್‌ಗಳನ್ನು ಸಹ ನಾವು ಪ್ರಥಮ ಹಂತದಲ್ಲಿ ಹೆಚ್ಚಿಗೆ ಮಾಡಿದ್ದೇವೆ. ಇದರ ಜೊತೆಗೆ, ಕೋವಿಡ್-19ಗೆ ಬೇಕಾಗಿರುವಂತಹ ವಿಶೇಷವಾದಂತಹ ಔಷಧಿಗಳನ್ನು ಅವೊತ್ತಿನ ಸಂದರ್ಭದಲ್ಲಿ ಅಂದರೆ, ಬಹಳಷ್ಟು ಕೊರತೆ ಇದ್ದಂತಹ ಸಂದರ್ಭದಲ್ಲಿಯೂ ಸಹ ರಾಜ್ಯದ ಜನತೆಗೆ ಜೀವ ಉಳಿಸುವ ಸಲುವಾಗಿ ಅದನ್ನು ನಾವು ವಿದೇಶದಿಂದ ಹಾಗೂ ದೇಶದಲ್ಲಿರುವ ಎಲ್ಲಾ ಔಷಧ ತಯಾರಕರಿಂದ ಪಡೆದು ಜನತೆಗೆ ಒದಗಿಸಿದ್ದೇವೆ.

ಇವೊತ್ತಿನ ದಿವಸ ಪ್ರಥಮ ಹಂತದಲ್ಲಿ ಕೋವಿಡ್-19 ವೈರಾಣುಗಳ ಬಗ್ಗೆ ನಮಗೆ ಸಂಪೂರ್ಣವಾದ ಮಾಹಿತಿ ಇಲ್ಲದ ಕಾರಣದಿಂದ ನಾವು ಹಲವಾರು ಸಾವು-ನೋವುಗಳನ್ನು ನೋಡಿರುತ್ತೇವೆ. ಇಂತಹ ಸಂದರ್ಭದಲ್ಲಿ ಯಾರು ಕೋವಿಡ್-19 ನಿಂದ ಮರಣ ಹೊಂದಿದ್ದಾರೆ, ಅವರಿಗೂ ಕೂಡ ಕರ್ನಾಟಕ ಸರ್ಕಾರ ಪ್ರಥಮವಾಗಿ ರಾಜ್ಯವಾಗಿ ಅವರಿಗೆ ಸಹಾಯ ಮಾಡಿ, ಒಂದು ಲಕ್ಷ ರೂಪಾಯಿ ಪರಿಹಾರ ಹಣ ಕೊಡುವಂಥದ್ದು ಅಷ್ಟೇ ಅಲ್ಲದೇ, ಕೇಂದ್ರ ಸರ್ಕಾರದಿಂದ ಸಹ ಐವತ್ತು ಸಾವಿರ ರೂಪಾಯಿ ಪರಿಹಾರ ಹಣ ಕೊಡುವಂತಹ ಕೆಲಸ ಸಹ ಆಗಿರುತ್ತದೆ. ಇದಲ್ಲದೇ, ಆ ಸಂದರ್ಭದಲ್ಲಿ ಬಹಳಷ್ಟು ಜನ ಸಂಕಷ್ಟಕ್ಕೆ ಈಡಾದರು. ಬೇರೆ ಬೇರೆ ವೃತ್ತಿಯಲ್ಲಿರುವವರು ಸಂಕಷ್ಟಕ್ಕೆ ಈಡಾದರು. ದಿನಗೂಲಿಯಲ್ಲಿ ಇರುವಂತಹವರು ಹಲವಾರು ಜನರು ಸಂಕಷ್ಟಕ್ಕೆ ಈಡಾದರು. ಅದೇ

ರೀತಿ ನೇಕಾರರು ಇರಬಹುದು, ಮೀನುಗಾರರು ಇರಬಹುದು, ರೈತರು ಇರಬಹುದು, ವಿವಿಧ ವೃತ್ತಿಯಲ್ಲಿ ಇರುವಂತಹವರು, ಬೀದಿ ಬದಿಯಲ್ಲಿ ಇರುವಂತಹ ವ್ಯಾಪಾರಿಗಳು ಇರಬಹುದು, ಅವರೆಲ್ಲರಿಗೂ ಸಹ ನಾವು ಸುಮಾರು ಎರಡೂವರೆ ಸಾವಿರ ಕೋಟಿಗಿಂತಲೂ ಹೆಚ್ಚು ಹಣದಲ್ಲಿ ಅವರಿಗೆ ಸಹಾಯ-ಸಹಕಾರವನ್ನು ನಾವು ಮಾಡಿರುವಂಥದ್ದಾಗಿದೆ.

ಕೋವಿಡ್-19 ಎರಡನೆ ಅಲೆಯಲ್ಲಿ ನಮಗೆ ಇನ್ನೊಂದು ದೊಡ್ಡ ಸವಾಲು ಎದುರಾಗಿದ್ದು, ಉಸಿರಾಟದ ತೊಂದರೆಯಿಂದಾಗಿ ವಿಶೇಷವಾಗಿ ಆಕ್ಸಿಜನ್ ಕೊರತೆ ಆದಂತಹ ಸಂದರ್ಭದಲ್ಲಿ ನಾವು ಒಂದು ದಿವಸ ಕೂಡ ಆಕ್ಸಿಜನ್ ಕೊರತೆ ಆಗದ ರೀತಿಯಲ್ಲಿ ವ್ಯವಸ್ಥೆ ಮಾಡುವಂತಹ ಪ್ರಯತ್ನಗಳನ್ನು ಮಾಡಿರುತ್ತೇವೆ. ಬೇರೆ ಬೇರೆ ರಾಜ್ಯಗಳಿಂದ ಹಾಗೂ ಬೇರೆ ಬೇರೆ ದೇಶಗಳಿಂದಲೂ ಸಹ ನಾವು ಆಕ್ಸಿಜನ್ ತರುವಂತಹ ಕೆಲಸವನ್ನು ಮಾಡಿದ್ದೇವೆ. ಅಷ್ಟೆ ಅಲ್ಲದೇ, ಶವ ಸಂಸ್ಕಾರದವರೆಗೂ ನಾವು ಕೋವಿಡ್-19 ನಿರ್ವಹಣೆ ಮಾಡಿರುತ್ತೇವೆ. ಹೀಗಾಗಿ, ಒಂದು ವರ್ಷದಲ್ಲಿ ಸುಮಾರು 7 ತಿಂಗಳು ಕೋವಿಡ್-19 ನಮ್ಮನ್ನು ಆವರಿಸಿಕೊಂಡಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿಯೂ ಕೂಡ ನಮ್ಮ ಅಭಿವೃದ್ಧಿ ಪಥವನ್ನು ಬಿಡಬಾರದೆಂಬ ಕಾರಣದಿಂದ ಹಲವಾರು ಕ್ರಮಗಳನ್ನು ಇವೊತ್ತಿನ ದಿವಸ ನಾವು ತೆಗೆದುಕೊಂಡಿರುತ್ತೇವೆ. ಆ ಸಂದರ್ಭದಲ್ಲಿ ಆರ್ಥಿಕತೆ ಏನು ಹಿಂಜರಿತ ಆಗಿತ್ತು, ಅದನ್ನು ನಾವು ಕೂಡಲೇ ಮರಳಿ ಪಥಕ್ಕೆ ತರಬೇಕು, ಆರ್ಥಿಕತೆಯನ್ನು ಉತ್ತಮವಾಗಿ ನಡೆಸಬೇಕು ಎನ್ನುವಂತಹ ದೃಷ್ಟಿಯಿಂದ ನಾವು ಹಲವಾರು ಕ್ರಮಗಳನ್ನು ಪ್ರಾರಂಭ ಮಾಡಿದ್ದೇವೆ. ಕೋವಿಡ್-19 ಒಂದು ಕಡೆಯಾದರೆ, ಪ್ರವಾಹ ಮತ್ತೊಂದು ಕಡೆ. ಕೋವಿಡ್-19 ಸಂದರ್ಭದಲ್ಲಿಯೇ ಎರಡು ಬಾರಿ ದೊಡ್ಡ ಪ್ರವಾಹಗಳನ್ನು ನಾವು ಕಳೆದ ವರ್ಷ ನೋಡಿರುತ್ತೇವೆ. ಅಲ್ಲದೇ, ಪ್ರವಾಹದ ಜೊತೆಗೆ, ನಿರಂತರವಾಗಿ ಮಳೆ ಸಹ ಬಂದಿರುತ್ತದೆ. ನವೆಂಬರ್ ತಿಂಗಳ ಅಂತ್ಯದವರೆಗೂ ಸಹ ನಾವು ಮಳೆಯನ್ನು ನೋಡಿರುತ್ತೇವೆ. ಇಡೀ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಹ ಇದೇ ರೀತಿ ವ್ಯಾಪಕವಾಗಿ ದೊಡ್ಡ ಮಳೆ ಬಂದಿದ್ದರಿಂದ ನಮ್ಮ ರೈತರು ಬೆಳೆದಂತಹ ಬೆಳೆ ಇನ್ನೇನು ಕಟಾವು ಮಾಡಬೇಕು ಎನ್ನುವಂತಹ ಸಂದರ್ಭದಲ್ಲಿ ಅದು ಮಳೆಗೆ ಸಂಪೂರ್ಣವಾಗಿ ಸಿಲುಕಿ ಅಪಾರವಾದ ನಷ್ಟವಾಗಿರುತ್ತದೆ.

**(ಮುಂದು...)**

**(102) 22.02.2022 2.50 ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ್ ಬೊಮ್ಮಾಯಿ (ಮುಂದು):-**

ಆ ಸಂದರ್ಭದಲ್ಲಿ ರೈತರ ಸಹಾಯಕ್ಕೆ ಹೋಗಬೇಕಾಗಿತ್ತು. ಪ್ರವಾಹ ಬಂದ ಪ್ರಯುಕ್ತ ಮನೆಗಳಿಗೆ ದೊಡ್ಡ ಪ್ರಮಾಣದಲ್ಲಿ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ. ಪೂರ್ಣ ಪ್ರಮಾಣದಲ್ಲಿ ಮನೆಗಳು ನೆಲಸಮಗೊಂಡಿದ್ದರೆ ಅಥವಾ ಭಾಗಶಃ ಮನೆಗಳು ಹಾಳಾಗಿದ್ದರೆ ತಲಾ ರೂ.5.00 ಲಕ್ಷ, ರೂ.3.00 ಲಕ್ಷ ಹಾಗೂ ರೂ.50 ಸಾವಿರದಂತೆ ಬೇರೆ ಬೇರೆ ಹಂತದಲ್ಲಿ ರೂ.400.52 ಕೋಟಿಗಳಷ್ಟು ಅನುದಾನವನ್ನು ನೀಡಿದ್ದೇವೆ. ಮಳೆ ಬಂದ ಸಂದರ್ಭದಲ್ಲಿ ಎನ್.ಡಿ.ಆರ್.ಎಫ್ ನಾರ್ಮ್ಸ್ ಪ್ರಕಾರ ಒಂದು ಹೆಕ್ಟೇರ್ ಪ್ರದೇಶಕ್ಕೆ ರೂ.6800 ನೀಡುತ್ತಾರೆ. ಅದರೊಂದಿಗೆ ನಾವು ಸಹ ಮೊನ್ನೆ ದಿವಸ ಬೆಳಗಾವಿ ಅಧಿವೇಶನದಲ್ಲಿ ಘೋಷಿಸಿದಂತೆ ಎನ್.ಡಿ.ಆರ್.ಎಫ್ ನಿಗಧಿಪಡಿಸಿದ ರೂ.6800 ರೊಂದಿಗೆ ರಾಜ್ಯ ಸರ್ಕಾರವು ರೂ.6800 ಗಳನ್ನು ಸೇರಿಸಿ, ಒಂದು ಹೆಕ್ಟೇರ್ ಪ್ರದೇಶಕ್ಕೆ ಒಟ್ಟು ರೂ.13600 ಗಳನ್ನು ಮಳೆಯಾಶ್ರಿತ ಬೆಳೆಗೆ ಪರಿಹಾರ ನೀಡಿದ್ದೇವೆ. ಅದೇ ರೀತಿ ನೀರಾವರಿ ಬೆಳೆಗಳಿಗೆ ರೂ.13500 ರಿಂದ ರೂ.25000ಕ್ಕೆ ಹೆಚ್ಚಿಸಿ ಒಂದು ಹೆಕ್ಟೇರ್‌ಗೆ ನೀಡಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಕೋವಿಡ್-19 ವಿಚಾರದ ಕುರಿತು ಮಾತನಾಡುತ್ತಿದ್ದಾರೆ. **(ಗೊಂದಲ)** ಕೋವಿಡ್-19 ನಲ್ಲಿಯು ಬಹಳಷ್ಟು ಭ್ರಷ್ಟಾಚಾರವಾಗಿದ್ದು, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬೆಳಕು ಚೆಲ್ಲುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ತಾವು ಆಮೇಲೆ ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಗುವುದಿಲ್ಲ. ಅವರು ಚರ್ಚೆಯನ್ನು ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಸವರಾಜ್ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ತೋಟಗಾರಿಕೆ ಬೆಳೆಗಳಿಗೆ ರೂ.18000 ರಿಂದ ರೂ.28000ಕ್ಕೆ ಹೆಚ್ಚಿಸಿ ರೈತರಿಗೆ ಪರಿಹಾರವನ್ನು ನೀಡಿದ್ದೇವೆ. ಹಲವಾರು ಒತ್ತಡಗಳ ಮಧ್ಯೆಯು ಸಹ ಅಭಿವೃದ್ಧಿ ಕಾರ್ಯವನ್ನು ನಿಲ್ಲಿಸಲಿಲ್ಲ. ನಾನು

ಮುಖ್ಯಮಂತ್ರಿಯಾದ ಮೊದಲನೇ ದಿವಸವೇ "ರೈತ ವಿದ್ಯಾನಿಧಿ" ಸ್ಥಾಪನೆ ಮಾಡಿದ್ದೇನು. ಯಾವುದೇ ರಾಜ್ಯದಲ್ಲಿ ಈ ಯೋಜನೆ ಇರಲಿಲ್ಲ. ಪ್ರಥಮ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಸ್ಥಾಪನೆ ಮಾಡಿ, ರೂ.2000 ದಿಂದ ರೂ.11000 ವರೆಗೂ ಪಿ.ಯು.ಸಿ. ಯಿಂದ ಪಿ.ಜಿ. ವರೆಗೂ ರೈತ ಮಕ್ಕಳಿಗಾಗಿ "ರೈತ ವಿದ್ಯಾನಿಧಿ" ಯನ್ನು ಸ್ಥಾಪನೆ ಮಾಡಿದ್ದೇವೆ. ನಮ್ಮ ರೈತ ಮಕ್ಕಳು ಸಹ ವಿದ್ಯಾವಂತರಾಗಬೇಕು, ಹೊರಗಿನ ಕ್ಷೇತ್ರದಲ್ಲಿ ಮುಂದೆ ಬರಬೇಕು ಎಂದು ಈ ಯೋಜನೆಯನ್ನು ಮಾಡಿದ್ದೇವೆ. ಇದುವರೆವಿಗೂ ಸುಮಾರು 4 ಲಕ್ಷ 50 ಸಾವಿರ ರೈತ ಮಕ್ಕಳಿಗೆ "ರೈತ ವಿದ್ಯಾನಿಧಿ" ಒದಗಿಸಿದ್ದೇವೆ. ಅದನ್ನು ಹಾಗೆಯೇ ಮುಂದುವರೆಸಿ, 8, 9 ಮತ್ತು 10ನೇ ತರಗತಿಗಳಲ್ಲಿನ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೂ ಸಹ ರೂ.2000 "ವಿದ್ಯಾನಿಧಿ" ನೀಡುವ ಕೆಲಸವನ್ನು ಮಾಡಿದ್ದೇವೆ. ಪ್ರಥಮ ಬಾರಿ ಗ್ರಾಮೀಣ ಪ್ರದೇಶದ ರೈತ ಮಕ್ಕಳಿಗೆ ಗಮನವನ್ನು ನೀಡಿದ್ದೇವೆ. ಅದೇ ರೀತಿ ಕಾರ್ಮಿಕ ಕಲ್ಯಾಣಕ್ಕಾಗಿ 90 ಸಾವಿರ ಕಟ್ಟಡ ಕಾರ್ಮಿಕರ ಮಕ್ಕಳಿಗೆ ರೂ.150.00 ಕೋಟಿಗಳಷ್ಟು "ವಿದ್ಯಾನಿಧಿ" ನೀಡುವ ಕೆಲಸವನ್ನು ಮಾಡಿದ್ದೇವೆ. ಕೈಗಾರಿಕೆಯಲ್ಲಿ ವಿದೇಶಿ ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ರಾಜ್ಯ ನಂ.1 ಸ್ಥಾನದಲ್ಲಿದೆ. ನಮ್ಮ ದೇಶಕ್ಕೆ ಶೇಕಡ 45 ರಷ್ಟು ವಿದೇಶಿ ಬಂಡವಾಳ ಬಂದಿದ್ದು, 2020-21ನೇ ಸಾಲಿನಲ್ಲಿ ಕರ್ನಾಟಕಕ್ಕೆ ವಿದೇಶಿ ಬಂಡವಾಳ ಬಂದಿದ್ದು, ಅದು ಈ ವರ್ಷವು ಸಹ ಮುಂದುವರೆಯುತ್ತಿದೆ. ಹಾಗಾಗಿ ಕೃಷಿ, ಕೈಗಾರಿಕೆಯಲ್ಲಿ ಪ್ರಗತಿ ಸಾಧಿಸಬೇಕೆಂಬುದು ನಮ್ಮ ಇಚ್ಛಾಶಕ್ತಿಯಾಗಿದೆ. ಅದೇ ರೀತಿ ನಗರ ಪ್ರದೇಶದಲ್ಲಿ ಶೇಕಡ 37 ರಿಂದ 38 ರಷ್ಟು ಜನಸಂಖ್ಯೆ ಇದ್ದು, ಒಂದು ವಿಶೇಷ ಯೋಜನೆಯಡಿ ವಿವಿಧ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಮೂಲಭೂತ ಸೌಕರ್ಯಕ್ಕೆ 3855 ಕೋಟಿ ರೂಪಾಯಿ ಮಂಜೂರು ಮಾಡಿದ್ದೇವೆ. ಈಗಾಗಲೇ ಬೆಂಗಳೂರು ನಗರದ ಅಭಿವೃದ್ಧಿಗಾಗಿ ನಗರೋತ್ಥಾನ ಯೋಜನೆಯಡಿ ರೂ.6000 ಕೋಟಿ ಮಂಜೂರು ಮಾಡಲಾಗಿದೆ. ಇವೆಲ್ಲದರ ನಡುವೆಯು ಸುಮಾರು 31 ಸಾವಿರದ 627 ಹೆಕ್ಟೇರ್ ಪ್ರದೇಶಕ್ಕೆ ಹೊಸದಾಗಿ ನೀರಾವರಿ ಸೃಜನೆಯನ್ನು ಮಾಡಿದ್ದೇವೆ. ಅತ್ಯಂತ ಕಷ್ಟದಲ್ಲಿರುವ ಸಂಧ್ಯಾ ಸುರಕ್ಷಾ, ವಿಶೇಷ ಚೇತನರು, ವಿಧವಾ ವೇತನ ಪಿಂಚಣಿಯನ್ನು ಸುಮಾರು ರೂ.200 ಪ್ರತಿಯೊಬ್ಬರಿಗೂ ಹೆಚ್ಚಿಸಿ, ಸುಮಾರು 58 ಲಕ್ಷ ಕುಟುಂಬಗಳಿಗೆ ಸಹಾಯ ಮಾಡಿದ್ದೇವೆ.

ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಆಯುಷ್ಮಾನ್ ಭಾರತ್ ಯೋಜನೆ ಅಡಿ 8.4 ಲಕ್ಷ ಕಾರ್ಡ್‌ಗಳನ್ನು ವಿತರಣೆ ಮಾಡಿದ್ದೇವೆ. ಅದೇ ರೀತಿ ಮಹಿಳೆಯರ ಸಬಲೀಕರಣಕ್ಕಾಗಿ 7500 ಸ್ತ್ರೀ ಶಕ್ತಿ ಸಂಘಕ್ಕೆ ಒಂದೊಂದು ಲಕ್ಷಗಳಂತೆ ರೂ.75.00 ಕೋಟಿಗಳನ್ನು ಮೂಲ ಬಂಡವಾಳವಾಗಿ ನೀಡಿದ್ದೇವೆ. ನನ್ನ ಸರ್ಕಾರದ ಅಧಿಕಾರಕ್ಕೆ ಬಂದ ಮೇಲೆ 5 ಲಕ್ಷ

ಮನೆಗಳನ್ನು ಮಂಜೂರು ಮಾಡಿದ್ದು, ಅದರಲ್ಲಿ 4 ಲಕ್ಷ ಮನೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ 1 ಲಕ್ಷ ಮನೆಗಳನ್ನು ನಗರ ಪ್ರದೇಶದಲ್ಲಿ ಸ್ಥಾಪನೆ ಮಾಡಲಾಗಿದೆ ಮತ್ತು ಈ ಯೋಜನೆಯಡಿ 48 ಸಾವಿರ ಮನೆಗಳನ್ನು ನಿರ್ಮಿಸಿ ಪೂರ್ಣಗೊಳಿಸಲಾಗಿದೆ. ಅದಲ್ಲದೇ ಪ್ರಧಾನಮಂತ್ರಿ ಅವಾಸ್ ಯೋಜನೆಯಡಿ ಈ ವರ್ಷ ಸುಮಾರು ಎರಡೂವರೆ ಲಕ್ಷ ಮನೆಗಳನ್ನು ನಿರ್ಮಿಸಿ ಮಂಜೂರು ಮಾಡಲಾಗಿದೆ.

ಸ್ವಾತಂತ್ರ್ಯ ಮಹೋತ್ಸವದ ಅಮೃತ ಮಹೋತ್ಸವ ಯೋಜನೆಯಡಿ ಸಮಗ್ರವಾಗಿ ಅಭಿವೃದ್ಧಿಯಾಗಬೇಕೆಂಬ ದೃಷ್ಟಿಯಿಂದ ಅಮೃತ ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ, ಸುಮಾರು 750 ಗ್ರಾಮ ಪಂಚಾಯಿತಿಗಳನ್ನು ಸಮಗ್ರ ಅಭಿವೃದ್ಧಿಗಾಗಿ ಕೈಗೆತ್ತಿಕೊಂಡಿದ್ದೇವೆ. ಅದೇ ರೀತಿ ಅಮೃತ ಗ್ರಾಮೀಣ ವಸತಿ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಯಾರೂ ಸಹ ವಸತಿ ಹೀನರಾಗಿರಬಾರದೆಂದು ಗ್ರಾಮೀಣ ವಸತಿ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಸುಮಾರು 750 ರೈತ ಉತ್ಪಾದಕ ಸಂಸ್ಥೆಗಳನ್ನು ಹುಟ್ಟು ಹಾಕಿದ್ದೇವೆ. ಅಮೃತ ನಿರ್ಮಲ ಯೋಜನೆಯನ್ನು ಮಾಡಿದ್ದೇವೆ. ಶಾಲೆಗಳು, ಅಂಗನವಾಡಿಗಳು, ಕೌಶಲ್ಯ ತರಬೇತಿ, ನಗರೋತ್ಥಾನ ಯೋಜನೆ ಮತ್ತು ಅಮೃತ ಕ್ರೀಡಾ ದತ್ತು ಯೋಜನೆಯಡಿ ಮುಂದಿನ ಒಲಂಪಿಕ್‌ಗಾಗಿ ಸುಮಾರು 75 ಕ್ರೀಡಾ ಪಟುಗಳನ್ನು ದತ್ತು ತೆಗೆದುಕೊಳ್ಳುವಂಥ ಯೋಜನೆಯನ್ನು ಸಹ ಕೈಗೊಳ್ಳಲಾಗಿದೆ.

ಮತ್ತೊಂದು ಕ್ರಾಂತಿಕಾರಿಯಾದ "ಗ್ರಾಮ ಒನ್" ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ "ಗ್ರಾಮ ಒನ್" ಎನ್ನುವಂಥ ಘಟಕವನ್ನು ಸ್ಥಾಪನೆ ಮಾಡಿ, digitalization ಮೂಲಕ 100 ಸೇವೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ಒದಗಿಸುವಂಥ ವ್ಯವಸ್ಥೆ ಮಾಡಿದ್ದೇವೆ. ಬೆಂಗಳೂರಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ತಾಲ್ಲೂಕು ಮತ್ತು ಜಿಲ್ಲಾಡಳಿತ ಕಛೇರಿ ಮೊರೆ ಹೋಗುವುದನ್ನು ತಪ್ಪಿಸಿ, ಆತನ ಗ್ರಾಮದಲ್ಲಿಯೇ ವರಮಾನ ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ, Residential Certificate ಎಲ್ಲವನ್ನೂ ಪಡೆದುಕೊಳ್ಳಲು "ಗ್ರಾಮ ಒನ್" ಕೇಂದ್ರ ಸ್ಥಾಪಿಸಲಾಗಿದೆ. ಈಗಾಗಲೇ 12 ಜಿಲ್ಲೆಗಳಲ್ಲಿ "ಗ್ರಾಮ ಒನ್" ಕೇಂದ್ರ ಪೂರ್ಣಗೊಂಡಿದ್ದು, ಇನ್ನು 10 ಜಿಲ್ಲೆಗಳಿಗೆ ಕೆಲವೇ ದಿನಗಳಲ್ಲಿ "ಗ್ರಾಮ ಒನ್" ಕೇಂದ್ರ ಸ್ಥಾಪಿಸಲಾಗುವುದು. ಅದರ ಜೊತೆಗೆ ಜನಸ್ಪಂದನಾ, ಜನಸಮಗ್ರ ಯೋಜನೆಗಳನ್ನು ಸಹ ಸ್ಥಾಪಿಸಲಾಗಿದೆ. ಲೋಕೋಪಯೋಗಿ ಇಲಾಖೆ ವತಿಯಿಂದ ರಾಜ್ಯ ಹೆದ್ದಾರಿಗಳಿಗೆ ಈಗಾಗಲೇ 7500 ಕೋಟಿ ರೂಪಾಯಿಗಳಿಗೆ ಅನುಮೋದನೆ ನೀಡಲಾಗಿದೆ. ಅದರಿಂದಾಗಿ ನಾಲ್ಕನೇ ಹಂತದ

ರಾಜ್ಯ ಹೆದ್ದಾರಿಯ ಸಂಪೂರ್ಣ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು. ಸುಮಾರು 2200 ಕಿಲೋ ಮೀಟರ್ ಉದ್ದದ ಪ್ರಮುಖ ರಸ್ತೆಗಳ ಅಭಿವೃದ್ಧಿಗಾಗಿ K-SHIP (Karnataka State Highways Improvement Project) ನಡಿ ಕೈಗೊಳ್ಳಲಾಗುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಒಪ್ಪಿಕೊಂಡಿದ್ದು, ಅದೊಂದು ಕಾಂತ್ರಿಕಾರಿ ಆಗಿರುವಂಥದಾಗಿದ್ದು, ನಮ್ಮ ಯುವಕರನ್ನು ಮುಂದಿನ ಭವಿಷ್ಯಕ್ಕೆ ತಯಾರು ಮಾಡಬೇಕಾಗಿದೆ. ಜಗತ್ತಿನ ಅಂತರ ರಾಷ್ಟ್ರೀಯ ಸ್ಪರ್ಧಾತ್ಮಕ ಪರೀಕ್ಷೆಗೆ ನಮ್ಮ ನಾಡಿನ ಮಕ್ಕಳನ್ನು ಸಿದ್ಧ ಮಾಡಬೇಕಾಗಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮೂಲಕ ಹತ್ತು ಹಲವಾರು ಆಕಾಂಕ್ಷಿಗಳಿಗೆ ಅವಕಾಶ ಕಲ್ಪಿಸುವ ಕೆಲಸ ಮಾಡಲಾಗಿದೆ. ಪ್ರಥಮ ಹಂತದಲ್ಲಿ Higher Education ಮಾಡಲಾಗಿದೆ. ಇದೇ ಶೈಕ್ಷಣಿಕ ವಾರ್ಷಿಕ ವರ್ಷದಲ್ಲಿ primary ಮತ್ತು secondary education ನ್ನು ಸಹ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಅಳವಡಿಸಲಾಗುವುದು. ನಮ್ಮ ಸರ್ಕಾರದ ಅಧಿಕಾರಕ್ಕೆ ಬಂದ ಮೇಲೆ ಆಹಾರ ಭದ್ರತೆಯಲ್ಲಿ 4 ಕೆ.ಜಿ. ಅಕ್ಕಿ ಇರುವುದನ್ನು 5 ಕೆ.ಜಿ. ಅಕ್ಕಿ, 1 ಕೆ.ಜಿ. ಜೋಳ ಮತ್ತು ರಾಗಿಯನ್ನು ತೆಗೆದುಕೊಳ್ಳಲು ಅನುದಾನವನ್ನು ಸಹ ಬಿಡುಗಡೆ ಮಾಡಲಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ "ಮನೆ ಮನೆಗೆ ಗಂಗೆ" ಎನ್ನುವಂಥ "ಜಲ ಜೀವನ್ ಮಿಷನ್" ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ. ಕೇವಲ 6 ತಿಂಗಳುಗಳಲ್ಲಿ 11.27 ಲಕ್ಷ ಮನೆಗಳಿಗೆ ಹೊಸದಾಗಿ ನೀರಿನ ನಲ್ಲಿಯ ಸಂಪರ್ಕವನ್ನು ಕಲ್ಪಿಸಿರುವುದು ದಾಖಲೆಯ ಕೆಲಸವಾಗಿದೆ. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಮಹಾತ್ಮಕಾಂಕ್ಷಿ ಯೋಜನೆಯಾಗಿದ್ದು, ಎಲ್ಲಾ ಮನೆಗಳಿಗೂ ನೀರಿನ ಸೌಲಭ್ಯ ಒದಗಿಸಬೇಕೆಂದು ಅತ್ಯಂತ ಯೋಜನಾ ಬದ್ಧವಾಗಿ ಈ ಯೋಜನೆಯನ್ನು ತಂದು, ಹೆಚ್ಚು ನೀರಿನ source ಎಲ್ಲಿದೆ, ಅಂತಹ ಕಡೆಗಳಿಂದ ನೀರನ್ನು ತಂದು ಗ್ರಾಮೀಣ ಪ್ರದೇಶಗಳಿಗೆ ಒದಗಿಸಬೇಕೆಂದು ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಕಾರ್ಯಕ್ರಮವನ್ನು ಅತ್ಯಂತ ವೇಗವಾಗಿ ಮಾಡುತ್ತಿದ್ದೇವೆ. ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ಕಲ್ಯಾಣ ಕರ್ನಾಟಕಕ್ಕೆ ಈ ವರ್ಷ ರೂ.1400 ಕೋಟಿ ರೂಪಾಯಿಯನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಲಾಗಿದೆ. ಕಲ್ಯಾಣ ಕರ್ನಾಟಕ ಬೋರ್ಡ್ ಬಂದ ಮೇಲೆ ಇದೊಂದು ದಾಖಲೆಯಾಗಿದೆ. ಯಾವಾಗಲೂ ಸಹ ಪೂರ್ಣ ಪ್ರಮಾಣದಲ್ಲಿ ಅದೇ ವರ್ಷದಲ್ಲಿ ಹಣ ಬಿಡುಗಡೆಯಾಗಿರಲಿಲ್ಲ. ಆದರೆ, ನಮ್ಮ ಸರ್ಕಾರ ಸಂಪೂರ್ಣವಾಗಿ ಈ ವರ್ಷ ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ರೂ.1400 ಕೋಟಿ ಬಿಡುಗಡೆ ಮಾಡಿದ್ದೇವೆ. ಮುಂದಿನ ವರ್ಷದಲ್ಲಿ ರೂ.3000 ಕೋಟಿಗಳನ್ನು ಕಲ್ಯಾಣ ಕರ್ನಾಟಕ ಅಭಿವೃದ್ಧಿಗಾಗಿ ಮೀಸಲಿರಿಸಲಾಗುತ್ತಿದೆ. ಅದಲ್ಲದೇ

ನಮ್ಮ ಸರ್ಕಾರ ಮುನ್ನೋಟ ಮಾತ್ರವಲ್ಲದೇ ಭದ್ರ ಭವಿಷ್ಯಕ್ಕಾಗಿ ಬುನಾದಿ ಹಾಕುವ ದೃಷ್ಟಿಯಿಂದ ಹಲವಾರು ಆಡಳಿತ ಸುಧಾರಣೆಗೆ ಸಮಿತಿಯನ್ನು ನೀಡಿರುವ ವರದಿ ಏನಿದೆ, ಆ ಎರಡೂ ವರದಿಗಳನ್ನು ಅನುಷ್ಠಾನಗೊಳಿಸಲು ನಮ್ಮ ಸರ್ಕಾರ ಮುಂದಾಗಿದೆ.

**(ಮುಂದು)**

**(103)22.02.2022/3.00/ಎಸ್‌ಕೆ-ಎಕೆ** **(ಸಭಾಪತಿಯವರ ಉಪಸ್ಥಿತಿ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಗೆ ಬಂದು ಧರಣಿಗೆ ನಿರತರಾದರು)**

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು) (ಮುಂದು):-**

ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇವತ್ತು ಜನರಿಗೆ ಪರಿಹಾರ ಸಿಗುವುದು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿದೆ. ಅದನ್ನು ಕಡಿತಗೊಳಿಸಿ, ಸರಳವಾಗಿ ಜನರಿಗೆ ಪರಿಹಾರ ಮುಟ್ಟುವ ಸಲುವಾಗಿ ಹಲವಾರು ಯೋಜನೆಗಳನ್ನು ಬರುವಂತಹ ದಿನಗಳಲ್ಲಿ ಕೈಗೆತ್ತಿಕೊಳ್ಳುತ್ತೇವೆ. ಕೆ.ಎಸ್.ಆರ್.ಟಿ.ಸಿ., ಎಸ್ಕಾಂಗಳು ಹಲವಾರು ವರ್ಷಗಳ ನಿಷ್ಕ್ರೀಯತೆಯಿಂದಾಗಿ ಇವತ್ತು ಆರ್ಥಿಕ ಬಾರದಿಂದ ಕುಸಿದಿದ್ದಾವೆ. ಅವುಗಳನ್ನು restructure ಮಾಡಬೇಕು ಎನ್ನುವಂತಹ ಕಾರಣದಿಂದ ಸಮಿತಿಗಳನ್ನು ಮಾಡಿದ್ದು, ಈಗಾಗಲೇ ಆ ಸಮಿತಿಗಳಿಂದ ಮಧ್ಯಂತರ ವರದಿಗಳು ಬಂದಿವೆ. ಈ ಎರಡು ಸಂಸ್ಥೆಗಳನ್ನು ಸ್ವಾವಲಂಬನೆಯ ಸಂಸ್ಥೆಗಳನ್ನಾಗಿ ಮಾಡಲು, ಪ್ರಮುಖವಾದಂತಹ ನಿರ್ಧಾರಗಳನ್ನು ಬರುವಂತಹ ದಿನಗಳಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಏನಿದೆ. ಇದುವರೆಗೂ ಎಲ್ಲಾ capital investment ಮೇಲೆ ಕೈಗಾರಿಕೆಯಲ್ಲಿ incentive ಇತ್ತು. ಆದರೆ ಹೆಚ್ಚಿಗೆ ಕೆಲಸ ಕೊಡುತ್ತಾರೋ, ಅವರಿಗೆ ಹೆಚ್ಚು incentive ಕೊಡುವಂತಹ ಒಂದು employment policy ಯನ್ನು ಮುಂದಿನ ದಿನಗಳಲ್ಲಿ ತರುತ್ತಿದ್ದೇವೆ. ಅದರ ಜೊತೆ ಜೊತೆಗೆ R & D (Research and Development) policy ಯನ್ನು ತರುತ್ತಿದ್ದೇವೆ. ಇವತ್ತು ನಮ್ಮ ಕರ್ನಾಟಕ R & D ನಲ್ಲಿ ಬಹಳಷ್ಟು ಮುಂದಿದೆ. ಸುಮಾರು 180 ಸಂಸ್ಥೆಗಳು ಬೆಂಗಳೂರು ಅಂತರಾಷ್ಟ್ರೀಯ ಮಟ್ಟದಲ್ಲಿ ಇವೆ. ಅದರ ಲಾಭ ನಮ್ಮ ಕರ್ನಾಟಕ ರಾಜ್ಯಕ್ಕೆ ಆಗಬೇಕು ಎನ್ನುವ ಕಾರಣದಿಂದ ಇವತ್ತು R & D policy ಯನ್ನು ತರುತ್ತಿದ್ದೇವೆ. ಅದೇ ರೀತಿ semi-conductor

ವಲಯಕ್ಕೆ ಅತಿ ಹೆಚ್ಚು incentive ಕೊಟ್ಟು, ಇವತ್ತು ಅತಿ ದೊಡ್ಡ employment generation semi-conductor ವಲಯದಿಂದ ಆಗುತ್ತದೆ. ಅದೊಂದು ಪ್ರತಿಷ್ಠಿತವಾಗಿರುವಂತಹ ಕೈಗಾರಿಕೆ ಕರ್ನಾಟಕಕ್ಕೆ ಬರಬೇಕೆಂದು ಹೇಳಿ, ಅದಕ್ಕೆ ಹೊಸ incentives ಅನ್ನು ಕೂಡ ಇವತ್ತು ಅನುಮೋದನೆಯನ್ನು ಕೊಟ್ಟಿದೆ. ಇಂತಹ ಕಷ್ಟ ಕಾಲದಲ್ಲಿ ದಕ್ಷತೆಯಿಂದ ಕೆಲಸ ಮಾಡಿ ಪ್ರಗತಿಯ ಸಾಧನೆಯನ್ನು ಮಾಡಲು ಬರುವಂತಹ ದಿನಗಳಲ್ಲಿ ಭವ್ಯ ಭವಿಷ್ಯ ಕಟ್ಟಲು ನಾವು ದೂರದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇವೆ. ಮುಂದಿನ ಬಜೆಟ್‌ನಲ್ಲಿ ಈ ರಾಜ್ಯವನ್ನು ಸುಭಿಕ್ಷಾ ರಾಜ್ಯವನ್ನಾಗಿ ಮಾಡಬೇಕು, ಆರ್ಥಿಕವಾಗಿ ಸಬಲೀಕರಣವಾಗಬೇಕು, ರಾಜ್ಯ ಪ್ರಗತಿ ಪರವಾದಂತಹ ವೇಗದ ದಿಕ್ಕಿನಲ್ಲಿ ಮುನ್ನಡೆಯಬೇಕು ಮತ್ತು ಈ ಒಂದು ಪ್ರಗತಿಯಲ್ಲಿ ಎಲ್ಲಾ ವರ್ಗದವರಿಗೂ ಕೂಡ ಅವಕಾಶ ಇರಬೇಕು. 'Inclusive Growth' ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಘನತೆವೆತ್ತ ರಾಜ್ಯಪಾಲರು ಏನೊಂದು ಭಾಷಣವನ್ನು ಮಾಡಿದ್ದಾರೆ. ನಾನು ಈ ಸದನದ ಮುಖಾಂತರ ಗೌರವಪೂರ್ವಕವಾದಂತಹ ವಂದನೆಗಳನ್ನು ಸಲ್ಲಿಸುತ್ತೇನೆ.

ನಾನು ವಿರೋಧ ಪಕ್ಷದವರನ್ನು ಕುರಿತು ಹೇಳುತ್ತಿದ್ದೇನೆ. ಇವತ್ತು ಕೆಳಮನೆಯಲ್ಲಿ ಎಲ್ಲಾ ಕಾರ್ಯಕಲಾಪಗಳನ್ನು ಮುಗಿಸಿದ್ದೀರಾ. ಈ ಮೇಲ್ಮನೆ ಹಿರಿಯರ ಮನೆ. ಇಲ್ಲಿ ಸ್ವಲ್ಪ ಬದಲಾವಣೆಯಾಗಬೇಕು. ಇಲ್ಲಿ ಚರ್ಚೆಗಳಾಗಬೇಕು. ಈ ಮೇಲ್ಮನೆಯಿಂದ ನಾನು ಹಲವಾರು ಸಲಹೆ ಮತ್ತು ಸೂಚನೆಗಳನ್ನು ಬಯಸುತ್ತೇನೆ. ವಿರೋಧ ಪಕ್ಷದವರದು ತಮ್ಮದೇ ಆದಂತಹ ಪಾತ್ರ ಇಲ್ಲಿ ಇದೆ. 'Shadow Government' ಎಂದು ಕರೆದುಕೊಳ್ಳುತ್ತೀರಾ. ಆದರೆ ತಮ್ಮ ಜವಾಬ್ದಾರಿಯನ್ನು ನಿಭಾಯಿಸುವಂತಹ ಸಂದರ್ಭದಲ್ಲಿ, ತಾವು ಏತಕ್ಕಾಗಿ ಮುಷ್ಕರ ಮಾಡುತ್ತಿದ್ದೀರಾ? ಜನರ ಕಲ್ಯಾಣ ಕಾರ್ಯಕ್ರಮಕ್ಕಾಗಿಯೋ ಅಥವಾ ರೈತರು, ವಿದ್ಯಾರ್ಥಿಗಳು ಹಾಗೂ ಜನ ಪರವಾದ ಯಾವುದಾದರೊಂದು ವಿಷಯಗಳನ್ನು ತೆಗೆದುಕೊಂಡು ಧರಣಿ ಮಾಡಿದರೆ ಇದಕ್ಕೊಂದು ಅರ್ಥವಿದೆ. ಯಾರಿಗೂ ಇದರ ಬಗ್ಗೆ ಕಾಳಜಿ ಇಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ದೇಶದ ಪರವಾಗಿ ಧರಣಿ ಮಾಡುತ್ತಿದ್ದೇವೆ.

**ಶ್ರೀ ಬಸವರಾಜ ಬೊಮ್ಮಾಯಿ:-** ರಾಜಕೀಯ ಲಾಭವಾಗುತ್ತದೆ ಎಂದು ತಾವು ತಿಳಿದುಕೊಂಡಿದ್ದೀರಾ. ಇದರಿಂದಾಗಿ ತಮಗೆ ಯಾವುದೇ ರಾಜಕೀಯ ಲಾಭವಾಗುವುದಿಲ್ಲ ಎಂದು ನಾನು ಖಂಡಿತವಾಗಿ ಹೇಳುತ್ತೇನೆ. ಅತ್ಯಂತ ನಿಷ್ಪ್ರಯೋಜಕವಾಗಿರುವಂತಹ ಈ ಒಂದು

ಧರಣಿಯನ್ನು ತಾವು ಮಾಡುತ್ತಿದ್ದೀರಾ. ಕರ್ನಾಟಕ ರಾಜ್ಯದ ಜನತೆ ಇದನ್ನು ಒಪ್ಪುವುದಿಲ್ಲ. ಮಾನ್ಯ ಈಶ್ವರಪ್ಪನವರು ಹೇಳದೇ ಇರುವ ಮಾತುಗಳನ್ನು, ತಾವು ಸೇರಿಸಿಕೊಂಡು ಏನೊಂದು ಧರಣಿಯನ್ನು ಮಾಡುತ್ತಿದ್ದೀರಾ. ಈ ರಾಜ್ಯದ ಜನತೆ ಇದನ್ನು ಒಪ್ಪುವುದಿಲ್ಲ. ಇದೇ ವಿಚಾರವನ್ನು ಜನರ ಮುಂದೆ ತೆಗೆದುಕೊಂಡು ಬನ್ನಿ. ನಾವು ಕೂಡ ಇದೇ ವಿಚಾರವೊಂದೇ ಅಲ್ಲ. ನಮ್ಮ ರಾಜ್ಯದ ಅಭಿವೃದ್ಧಿಯನ್ನಿಟ್ಟುಕೊಂಡು ಮುಂದೆ ಸಾಗುತ್ತೇವೆ. ಈ ರಾಜ್ಯದ ಜನರು ತಮ್ಮನ್ನು ಖಂಡಿತವಾಗಿಯೂ ತಿರಸ್ಕಾರ ಮಾಡುತ್ತಾರೆ. ಆಡಳಿತ ಪಕ್ಷದಲ್ಲಿ ಇರುವುದಕ್ಕೆ ತಮಗೆ ಅವಕಾಶವಿಲ್ಲ. ಆಡಳಿತ ಪಕ್ಷದಲ್ಲಿ ಇಲ್ಲ. ಕನಿಷ್ಠ ವಿರೋಧ ಪಕ್ಷದ ಪಾತ್ರವನ್ನಾದರೂ ನಿಭಾಯಿಸಿ. ವಿರೋಧ ಪಕ್ಷವಾಗಿ ಕೆಲಸ ಮಾಡುವುದಕ್ಕೂ ಕೂಡ ತಮ್ಮ ಅರ್ಹತೆ ಮತ್ತು ನೈತಿಕತೆಯನ್ನು ಕಳೆದುಕೊಂಡಿದ್ದೀರಿ. ಈ ರಾಜ್ಯದ ಜನತೆಗೆ ಯಾವ ಮುಖವನ್ನು ತೋರಿಸುತ್ತೀರಿ? ನಿಮ್ಮ ಪಕ್ಷ 108 ವರ್ಷಗಳ ರಾಜಕೀಯ ಇತಿಹಾಸ ಇರುವಂತಹ ಪಕ್ಷ ಎಂದು ಹೇಳುತ್ತೀರಿ. ಇದು ಇತಿಹಾಸ. (ಗೊಂದಲ) ಇದನ್ನು ಮಾಡುತ್ತಿರುವುದು ಸರಿ ಇದೆಯೇ ಎಂದು ನಿಮ್ಮ central leadership ಗೆ ಕೇಳಿ, ಅವರು ಅದನ್ನು ಖಂಡಿತವಾಗಿಯೂ ಒಪ್ಪುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಸರ್ಕಾರ ನಡೆಸುವವರು ಎಲ್ಲಾ ಅರ್ಹತೆಗಳನ್ನು ಕಳೆದುಕೊಂಡಿದ್ದಾರೆ. ಈ ಪಕ್ಷ ರಾಷ್ಟ್ರದ್ರೋಹಿಗಳಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ರಾಷ್ಟ್ರಧ್ವಜ ಹೋರಾಟ ಹುಬ್ಬಳ್ಳಿಯಲ್ಲಿ ನಡೆಯಿತು. ಅಲ್ಲಿ ಮೂರ್ನಾಲ್ಕು ವರ್ಷ ರಾಷ್ಟ್ರಧ್ವಜವೇ ಹಾರಲಿಲ್ಲ. ರಾಷ್ಟ್ರಧ್ವಜಕ್ಕೋಸ್ಕರವಾಗಿ ಹೋರಾಟ ಮಾಡಿದವರ ಮೇಲೆ ಕಾಂಗ್ರೆಸ್ ಪಕ್ಷದವರು ಗುಂಡೇಟು ಹಾಕಿದ್ದರಿಂದ ಆರು ಜನರು ದುರ್ಮರಣ ಹೊಂದಿದರು. ರಾಷ್ಟ್ರಧ್ವಜ ಹೋರಾಟದಲ್ಲಿ ಆರು ಜನರನ್ನು ಕೊಂದಿದ್ದು, ಅವೊತ್ತಿನ ದಿನ ರಾಷ್ಟ್ರಧ್ವಜ ಹಾರಿಸಬಾರದು ಎಂದು ಹುಬ್ಬಳ್ಳಿಯಲ್ಲಿ ಮಿಲಿಟರಿ ಪಡೆ ತೆಗೆದುಕೊಂಡು ಬಂದಿದ್ದರು. ಹುಬ್ಬಳ್ಳಿಯಲ್ಲಿ ಮಿಲಿಟರಿ ಪಡೆಯನ್ನು ಏತಕ್ಕಾಗಿ ತೆಗೆದುಕೊಂಡು ಬಂದಿದ್ದರು ಎಂದರೆ, ರಾಷ್ಟ್ರಧ್ವಜವನ್ನು ಹಾರಿಸಬಾರದು ಎನ್ನುವ ಕಾರಣದಿಂದ ಮಿಲಿಟರಿ ಪಡೆಯನ್ನು ತಂದಿದ್ದರು.

**ಬಿ.ಕೆ. ಹರಿಪ್ರಸಾದ್:-** ಮಾನ್ಯ ಮುಖ್ಯಮಂತ್ರಿಗಳೇ, ಹಾವಿನಪುರದ ಆರ್.ಎಸ್.ಎಸ್. ಕಛೇರಿಯ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸಿ. ...

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾವು ವಿರೋಧ ಪಕ್ಷದವರಿಂದ ರಾಷ್ಟ್ರ ಭಕ್ತಿಯನ್ನು ಕಲಿಯಬೇಕಾ? ತಮಗೆ ಯಾವ ನೈತಿಕತೆಯೂ ಇಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ದಯವಿಟ್ಟು ಸುಮ್ಮನಿರಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಆರ್.ಎಸ್.ಎಸ್. headquarters ನಲ್ಲಿ ಖಾಕಿ ಚಡ್ಡಿ, ಕಪ್ಪು ಟೋಪಿ ಧರಿಸುವ ಆರ್.ಎಸ್.ಎಸ್. ಕಛೇರಿಯ ಮೇಲೆ, ರಾಷ್ಟ್ರ ಧ್ವಜವನ್ನು ಹಾರಿಸಿ.

**ಶ್ರೀ ಬಸವರಾಜ ಬೊಮ್ಮಾಯಿ:-** "ದಿನಾಂಕ: 14ನೇ ಫೆಬ್ರವರಿ 2022ರಂದು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಶಾಸಕರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಈ ಸದನದ ಮೂಲಕ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತಿದ್ದೇವೆ."

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ದಿನಾಂಕ: 14ನೇ ಫೆಬ್ರವರಿ 2022ರಂದು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರುಗಳಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುವುದು.

"ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ಸಮರ್ಪಿಸಿದ ವಂದನಾ ನಿರ್ಣಯವನ್ನು ಸದನವು ಅಂಗೀಕರಿಸಿತು ಹಾಗೂ ಅದಕ್ಕೆ ಸದನದ ಒಪ್ಪಿಗೆ ದೊರೆಯಿತು"

**ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಗೌರವಾನ್ವಿತ ಸಭಾಪತಿಯವರೇ, ಕಳೆದ ಹತ್ತು ದಿನಗಳ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಕಾರ್ಯಕಲಾಪಗಳನ್ನು ತಾವು ಶ್ರಮವಹಿಸಿ ಯಶಸ್ವಿಗೊಳಿಸಿದ್ದೀರಾ ಎನ್ನುವ ಕಾರಣಕ್ಕೆ ಈ ಹಿನ್ನೆಲೆಯಲ್ಲಿ ತಮಗೆ ಸರ್ಕಾರ ಮತ್ತು ಸದನದ ಪರವಾಗಿ ನಾನು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈ ಮೇಲ್ಮನೆಯ ಈ ಸದನಕ್ಕೆ ಮಾರ್ಗದರ್ಶನ ಮಾಡಿದಂತಹ ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳಿಗೆ ಸದನದ ಪರವಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

ಮಾನ್ಯ ಸಭಾಪತಿಯವರೇ, ತಮ್ಮ ಸಚಿವಾಲಯದ ಎಲ್ಲಾ ಸಿಬ್ಬಂದಿಗಳು ಮತ್ತು ಮಾಧ್ಯಮ ಮಿತ್ರರಿಗೂ ಸರ್ಕಾರದ ಪರವಾಗಿ ತಮ್ಮ ಮೂಲಕ ಧನ್ಯವಾದಗಳನ್ನರ್ಪಿಸುತ್ತೇನೆ.

ಕಳೆದ ಹತ್ತು ದಿನಗಳ ಅಧಿವೇಶನದಲ್ಲಿ ಈ ಸದನವನ್ನು ನಡೆಸುವುದಕ್ಕೆ ಸಹಕಾರ ಕೊಟ್ಟಂತಹ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ವಿರೋಧ ಪಕ್ಷದ ಸದಸ್ಯರಿಗೂ ತಮ್ಮ ಮೂಲಕ ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಒಟ್ಟಾರೆಯಾಗಿ ಕಾರ್ಯಕಲಾಪಗಳನ್ನು ಯಶಸ್ವಿಗೊಳಿಸಿದ್ದೀರಾ ಎನ್ನುವ ಕಾರಣಕ್ಕೆ ಸರ್ಕಾರದ ಪರವಾಗಿ ತಮಗೂ ಮತ್ತು ಇಡೀ ಸದನಕ್ಕೆ ಧನ್ಯವಾದಗಳನ್ನು ಸಮರ್ಪಣೆ ಮಾಡುತ್ತೇನೆ.

**ಸಭಾಪತಿಯವರು:–**ಈಗ ಸದನವನ್ನು ದಿನಾಂಕ 04.03.2022 ರವರೆಗೆ ಮುಂದೂಡಲಾಗಿದೆ.

**(ರಾಷ್ಟ್ರಗೀತೆಯೊಂದಿಗೆ ಸದನವು ಮಧ್ಯಾಹ್ನ 3 ಗಂಟೆ 07 ನಿಮಿಷಕ್ಕೆ ಮುಕ್ತಾಯಗೊಂಡಿತು ಹಾಗೂ ದಿನಾಂಕ 04ನೇ ಮಾರ್ಚ್ ಮಾಹೇ 2022 ರವರೆಗೆ ಮುಂದೂಡಲ್ಪಟ್ಟಿತು)**

<><><>